Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड—4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |

## MINISTRY OF LAW AND JUSTICE
### (Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely — (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಧನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, 1976

(1976ರ ಅಧಿನಿಯಮ ಸಂಖ್ಯೆ 76) [ಜೂನ್ 11, 1976]

(ಏಪ್ರಿಲ್ 1, 1984 ರಂದು ಜಾರಿಯಲ್ಲಿದ್ದಂತೆ)

ರಾಷ್ಟ್ರೀಯ ಗ್ರಂಥಾಲಯದ ಆಡಳಿತದ ಮತ್ತು ಸಂಬಂಧಪಟ್ಟ ಇತರ ಕೆಲವು ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು :—

## ಅಧ್ಯಾಯ—I

### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :—(1) ಈ ಅಧಿನಿಯಮವನ್ನು ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, 1976 ಎಂದು ಕರೆಯತಕ್ಕದು.

(2) ಇದು ಕೇಂದ್ರ ಸರ್ಕಾರವು ಸರಕಾರೀ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದು.

2. ಪರಿಭಾಷೆಗಳು :—ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,—

(ಕ) ''ಮಂಡಳಿ'' ಎಂದರೆ, 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮಂಡಳಿ ;

(ಖ) ''ಅಧ್ಯಕ್ಷ'' ಎಂದರೆ, ಮಂಡಳಿಯ ಅಧ್ಯಕ್ಷ ;

(ಗ) ''ನಿಧಿ'' ಎಂದರೆ, 23ನೇ ಪ್ರಕರಣದಲ್ಲಿ ಉಲ್ಲೇಖಿತವಾಗಿರುವ ನಿಧಿ ;

(ಘ) ''ಗ್ರಂಥಾಲಯ'' ಎಂದರೆ, ಕಲ್ಕತ್ತೆಯಲ್ಲಿರುವ ಮತ್ತು ಸಂವಿಧಾನವು ಪ್ರಾರಂಭವಾದಾಗ ರಾಷ್ಟ್ರೀಯ ಗ್ರಂಥಾಲಯ ಎಂದು ಕರೆಯಲಾಗುತ್ತಿದ್ದ ಸಂಸ್ಥೆ ;

(ಙ) ''ಸದಸ್ಯ'' ಎಂದರೆ, ಮಂಡಳಿಯ ಒಬ್ಬ ಸದಸ್ಯ ಮತ್ತು ಇದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ ;

(ಚ) ''ನಿಯಮಿಸಲಾದುದು'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

## ಅಧ್ಯಾಯ—II

### ರಾಷ್ಟ್ರೀಯ ಗ್ರಂಥಾಲಯ ಮಂಡಳಿ

3. ಮಂಡಳಿಯ ಸ್ಥಾಪನೆ ಮತ್ತು ನಿಗಮನ:—(1) ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ರಾಷ್ಟ್ರೀಯ ಗ್ರಂಥಾಲಯ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಸ್ಥಾಪಿಸತಕ್ಕದು.

(2) ಮಂಡಳಿಯು ಮೇಲೆ ಹೇಳಿದ ಹೆಸರನ್ನುಳ್ಳ, ನಿರಂತರ ಉತ್ತರಾಧಿಕಾರ ವಿರುವ ಹಾಗೂ ಸಾಮಾನ್ಯ ಮುದ್ರೆಯನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದು, ಮತ್ತು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ವತ್ತನ್ನು ಆರ್ಜಿಸಲು, ಹೊಂದಲು ಮತ್ತು ವಿಲೆ ಮಾಡಲು ಹಾಗೂ ಕರಾರು ಮಾಡಿಕೊಳ್ಳಲು ಅದಕ್ಕೆ ಅಧಿಕಾರ ವಿರತಕ್ಕದು ಮತ್ತು ಆ ಹೆಸರಿನಲ್ಲಿ ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಒಳಗಾಗಬಹುದು.

(3) (2)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಗ್ರಂಥಾಲಯಕ್ಕೆ ಸೇರಿದ ಪೀಠೋಪಕರಣ, ಲೇಖನ ಸಾಮಗ್ರಿ ಮತ್ತು ಅದೇ ಬಗೆಯ ಜಡ ಸರಕುಗಳನ್ನು ಬಿಟ್ಟು ಇತರ ಯಾವುವೇ ಹಸ್ತಪ್ರತಿಗಳನ್ನು, ಪುಸ್ತಕಗಳನ್ನು, ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದೆ ಮಾರತಕ್ಕದಲ್ಲ ಅಥವಾ ಅನ್ಯಥಾ ವಿಲೆ ಮಾಡತಕ್ಕದಲ್ಲ :

ಪರಂತು, ಯಾವನೇ ವ್ಯಕ್ತಿಯು ಗ್ರಂಥಾಲಯಕ್ಕೆ ದೇಣಿಗೆ ಕೊಟ್ಟ ಅಂಥ ಯಾವುವೇ ಹಸ್ತಪ್ರತಿಗಳನ್ನು, ಪುಸ್ತಕಗಳನ್ನು, ವಸ್ತುಗಳನ್ನು ಅಥವಾ ಪದಾರ್ಥಗಳನ್ನು ಮಾರಲು ಅಥವಾ ಅನ್ಯಥಾ ವಿಲೆ ಮಾಡಲು ಉದ್ದೇಶಿಸಿದ್ದಲ್ಲಿ ಹಾಗೆ ಮಾಡಲು ಸಂದರ್ಭಾನುಸಾರ, ಆ ದಾನಿಯು ಅಥವಾ ಅವನ ಹಿತಾಸಕ್ತಿಯ ಉತ್ತರಾಧಿಕಾರಿಯು ಲಿಖಿತ ಅನುಮತಿಯನ್ನು ಕೊಟ್ಟಿದ್ದ ಹೊರತು, ಈ ಉಪ-ಪ್ರಕರಣದ ಮೇರೆಗೆ ಯಾವ ಅನುಮೋದನೆಯನ್ನು ಕೊಡತಕ್ಕದಲ್ಲ.

4. ಮಂಡಳಿಯ ರಚನೆ :—ಮಂಡಳಿಯು ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದು, ಎಂದರೆ :—

(i) ಕೇಂದ್ರ ಸರ್ಕಾರದಿಂದ ನಾಮನಿರ್ದೇಶನವಾಗಬೇಕಾದ ವಿಶೇಷ ಪಾಂಡಿತ್ಯವುಳ್ಳ ಅಧ್ಯಕ್ಷ ;

(ii) ಸಂಸತ್ತಿನಿಂದ ಚುನಾಯಿತರಾಗಬೇಕಾದ ಮೂವರು ವ್ಯಕ್ತಿಗಳು, ಇವರಲ್ಲಿ ಇಬ್ಬರನ್ನು ಲೋಕಸಭೆಯು ತನ್ನ ಸದಸ್ಯರೊಳಗಿಂದ ಮತ್ತು ಒಬ್ಬನನ್ನು ರಾಜ್ಯಸಭೆಯು ತನ್ನ ಸದಸ್ಯರೊಳಗಿಂದ ಚುನಾಯಿಸತಕ್ಕದು ;

(iii) ಅಕ್ಷರಾನುಕ್ರಮದಲ್ಲಿ ರಾಜ್ಯ ಸರ್ಕಾರಗಳು ಸರದಿಯ ಮೇರೆಗೆ ನಾಮ ನಿರ್ದೇಶನ ಮಾಡಬೇಕಾದ ಮೂವರು ವ್ಯಕ್ತಿಗಳು ;

(iv) ಭಾರತದ ವಿಶ್ವವಿದ್ಯಾನಿಲಯಗಳನ್ನು ಪ್ರತಿನಿಧಿಸಲು ನಿಯಮಿಸಲಾದ ರೀತಿಯಲ್ಲಿ ನಾಮನಿರ್ದೇಶಿತರಾಗಬೇಕಾದ ನಾಲ್ವರು ವ್ಯಕ್ತಿಗಳು ;

ವಿವರಣೆ.—ಈ ಖಂಡದ ಉದ್ದೇಶಕ್ಕಾಗಿ, 'ವಿಶ್ವವಿದ್ಯಾನಿಲಯ' ಎಂಬುದು ವಿಶ್ವ ವಿದ್ಯಾನಿಲಯ ಅನುದಾನ ಆಯೋಗ ಅಧಿನಿಯಮ, 1956ರಲ್ಲಿ ಅದಕ್ಕೆ ಕೊಡಲಾದ ಅರ್ಥವನ್ನು ಹೊಂದಿರುತ್ತದೆ ಮತ್ತು ಇದು ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆಯೆಂದು ಕಾನೂನಿನ ಮೂಲಕ ಸಂಸತ್ತು ಘೋಷಿಸಿದ ಶಿಕ್ಷಣ ಸಂಸ್ಥೆಯನ್ನು ಒಳಗೊಳ್ಳುತ್ತದೆ ;

(v) ವಿಶ್ವವಿದ್ಯಾನಿಲಯ ಅನುದಾನ ಆಯೋಗದ ಅಧ್ಯಕ್ಷ ಅಥವಾ ಅದರ ಅಧ್ಯಕ್ಷನಿಂದ ನಾಮನಿರ್ದೇಶಿತ ನಾಗಬೇಕಾದ ಆ ಆಯೋಗದ ಸದಸ್ಯ ;

(vi) ಕೇಂದ್ರ ಸರ್ಕಾರವು ಅಕ್ಷರಾನುಕ್ರಮದಲ್ಲಿ ಸರದಿಯ ಮೇರೆಗೆ ನಾಮ ನಿರ್ದೇಶನ ಮಾಡಬೇಕಾದ ಕಲ್ಕತ್ತೆಯ ರಾಷ್ಟ್ರೀಯ ಗ್ರಂಥಾಲಯವನ್ನು ಒಳಗೊಂಡಿರದ, ಪುಸ್ತಕಗಳನ್ನು ಮತ್ತು ವೃತ್ತ ಪತ್ರಿಕೆಗಳನ್ನು (ಸಾರ್ವಜನಿಕ ಗ್ರಂಥಾಲಯಗಳು) ಒಪ್ಪಿಸುವ ಅಧಿನಿಯಮ, 1954ರ 2ನೇ ಪ್ರಕರಣದ (ಖ) ಖಂಡದ ಅರ್ಥದಲ್ಲಿ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಒಂದರ ಮುಖ್ಯ ಗ್ರಂಥಾಲಯಾಧಿಕಾರಿ, ಅವನನ್ನು ಯಾವ ಹೆಸರಿನಿಂದಲೇ ಕರೆಯಲಿ ;

(vii) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ, ಐತಿಹಾಸಿಕ, ಸಾಹಿತ್ಯಕ ಅಥವಾ ಸೌಂದರ್ಯಕ ಮಹತ್ವದ ಹಸ್ತಪ್ರತಿಗಳ ಮಹತ್ವದ ಸಂಗ್ರಹವುಳ್ಳ ಭಾರತದಲ್ಲಿನ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಒಂದರ [(vii)ನೇ ಖಂಡದಲ್ಲಿ ಉಲ್ಲೇಖಿತವಾದ ಗ್ರಂಥಾಲಯವಲ್ಲದ] ಮುಖ್ಯ ಗ್ರಂಥಾಲಯಾಧಿಕಾರಿ;

(viii) ಸಂಘಗಳ ನೋಂದಣಿ ಅಧಿನಿಯಮ, 1860 (1860ರ 21)ರ ಮೇರೆಗೆ ನೋಂದಾಯಿತವಾದ ಭಾರತೀಯ ಗ್ರಂಥಾಲಯ ಸಂಘದಿಂದ ನಾಮ ನಿರ್ದೇಶಿತನಾಗಬೇಕಾದ ಒಬ್ಬ ವ್ಯಕ್ತಿ ;

(ix) ಭಾರತದ ರಾಷ್ಟ್ರೀಯ ಪ್ರಾಚೀನ ಪತ್ರಾಗಾರದ ನಿರ್ದೇಶಕ ;

(x) ಕೇಂದ್ರ ಸರ್ಕಾರದಿಂದ ನಾಮನಿರ್ದೇಶಿತರಾಗಬೇಕಾದ, ಮಾನವಿಕ ಶಾಸ್ತ್ರಗಳು, ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ಮತ್ತು ತಾಂತ್ರಿಕ ವಿಜ್ಞಾನ ಹಾಗು ಕಾನೂನುಗಳನ್ನು ಒಳಗೊಂಡ ವಿವಿಧ ರಂಗಗಳಲ್ಲಿ ಪ್ರಸಿದ್ಧರಾದ ಎಂಟು ಜನ ವಿದ್ವಾಂಸರು ;

(xi) ಗ್ರಂಥಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಮತ್ತು ಇತರ ನಿಯೋಜಿತರು, ನಿಯಮಿಸ ಬಹುದಾದಂಥ ರೀತಿಯಲ್ಲಿ, ತಮ್ಮೊಳಗಿಂದ ಚುನಾಯಿಸಬೇಕಾದ ಇಬ್ಬರು ವ್ಯಕ್ತಿಗಳು :

ಪರಂತು, ಅವರಲ್ಲಿ ಕನಿಷ್ಠ ಒಬ್ಬನಾದರೂ ಗ್ರಂಥಾಲಯದ ತಾಂತ್ರಿಕ ಸಿಬ್ಬಂದಿಗೆ ಸೇರಿದವನಾಗಿರತಕ್ಕದು.

ವಿವರಣೆ.—ಈ ಖಂಡದ ಉದ್ದೇಶಗಳಿಗಾಗಿ, "ತಾಂತ್ರಿಕ ಸಿಬ್ಬಂದಿಗೆ ಸೇರಿದವನು" ಎಂದರೆ, ಗ್ರಂಥಾಲಯಾಧಿಕಾರಿ, ಉಪ-ಗ್ರಂಥಾಲಯಾಧಿಕಾರಿ ಸಹಾಯಕ ಗ್ರಂಥಾಲಯಾಧಿಕಾರಿ, ತಾಂತ್ರಿಕ ಸಹಾಯಕ, ಕಿರಿಯ ತಾಂತ್ರಿಕ ಸಹಾಯಕ, ಉಪನ್ಯಾಸಕ, ಸೂಕ್ಷ್ಮ ಛಾಯಾಚಿತ್ರ ಗ್ರಾಹಕ, ರಸಾಯನ ಶಾಸ್ತ್ರಜ್ಞ ಮತ್ತು ನಿಯಮಿಸಬಹುದಾದಂಥ ಅದೇ ಬಗೆಯ ಇತರ ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳು ;

(xii) ಗ್ರಂಥಾಲಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವ ಮಂತ್ರಾಲಯವನ್ನು ಅಥವಾ ಕೇಂದ್ರ ಸರ್ಕಾರದ ಇಲಾಖೆಯನ್ನು ಮತ್ತು ಹಣಕಾಸಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವ ಕೇಂದ್ರ ಸರ್ಕಾರದ ಮಂತ್ರಾಲಯವನ್ನು ಅನುಕ್ರಮವಾಗಿ ಪ್ರತಿನಿಧಿಸಲು ಕೇಂದ್ರ ಸರ್ಕಾರದಿಂದ ನಾಮ ನಿರ್ದೇಶಿತರಾಗಬೇಕಾದ, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗೆ ಕಡಮೆಯಿರದ, ಇಬ್ಬರು ವ್ಯಕ್ತಿಗಳು ;

(xiii) ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರತಿನಿಧಿಸುವುದಕ್ಕಾಗಿ ಆ ಸರ್ಕಾರದಿಂದ ನಾಮನಿರ್ದೇಶಿತನಾಗ ಬೇಕಾದ ಒಬ್ಬ ವ್ಯಕ್ತಿ ;

(xiv) ಗ್ರಂಥಾಲಯ ನಿರ್ದೇಶಕ; ಇವನು ಸದಸ್ಯ ಕಾರ್ಯದರ್ಶಿಯಾಗಿರತಕ್ಕದು.

5. ಸದಸ್ಯ ಪದಕ್ಕೆ ಅನರ್ಹತೆ.—ಯಾವನೇ ವ್ಯಕ್ತಿಯು,—

(ಕ) ನೈತಿಕ ಪತನವನ್ನೊಳಗೊಳ್ಳುವ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದು ಕಾರಾವಾಸದ ದಂಡನೆಗೆ ಗುರಿಯಾಗಿದ್ದರೆ, ಅಥವಾ

(ಖ) ವಿಮೋಚಿತನಾಗಿರದ ದಿವಾಳಿಯಾಗಿದ್ದರೆ ; ಅಥವಾ

(ಗ) ಅಸ್ವಸ್ಥ ಮನಸ್ಕನಾಗಿದ್ದು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಘ) ಸದಸ್ಯನಾಗಿ ತನ್ನ ಪ್ರಕಾರ್ಯವನ್ನು ನಿರ್ವಹಿಸಲು ಪ್ರತಿಕೂಲವನ್ನುಂಟುಮಾಡುವ ಸಂಭವವಿರುವಂಥ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಮಂಡಳಿಯಲ್ಲಿ ಹೊಂದಿದ್ದರೆ,

ಮಂಡಳಿಯ ಅಥವಾ 11ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯನಾಗಿ ಸಂದರ್ಭಾನುಸಾರ ನಾಮನಿರ್ದೇಶಿತನಾಗಲು ಅಥವಾ ಚುನಾಯಿತನಾಗಲು, ಮತ್ತು ಸದಸ್ಯನಾಗಿ ಇರಲು ಅವನನ್ನು ಅನರ್ಹಗೊಳಿಸತಕ್ಕದು.

6. ಸದಸ್ಯರ ಪದಾವಧಿ, ಇತ್ಯಾದಿ.—(1) 4ನೇ ಪ್ರಕರಣದ ಮೇರೆಗೆ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು, ಸಂದರ್ಭಾನುಸಾರ, ಪ್ರತಿಯೊಂದು ಸಲ ನಾಮನಿರ್ದೇಶನ ಮಾಡಿದುದನ್ನು ಅಥವಾ ಚುನಾಯಿಸಿದುದನ್ನು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕದು ಮತ್ತು ಅವರ ಪದಾವಧಿಯು ಅಂಥ ಅಧಿಸೂಚನೆಯ ದಿನಾಂಕದಿಂದ ಮೂರು ವರ್ಷಗಳಾಗಿರತಕ್ಕದು :

ಪರಂತು, 4ನೇ ಪ್ರಕರಣದ (1)ನೇ ಉಪ-ಪ್ರಕರಣದ (ii)ನೇ ಖಂಡದ ಮೇರೆಗೆ ಅಥವಾ ಆ ಉಪ-ಪ್ರಕರಣದ (xi)ನೇ ಖಂಡದ ಮೇರೆಗೆ ಚುನಾಯಿತನಾದ ಸದಸ್ಯನ ಪದಾವಧಿಯು, ಸಂದರ್ಭಾನುಸಾರ, ಅವನು ಯಾವ ಸದನದಿಂದ ಚುನಾಯಿತನಾದನೋ ಆ ಸದನದ ಸದಸ್ಯನಾಗಿರುವುದು ಅಥವಾ ಮಂಡಳಿಯ ನಿಯೋಜನೆಯಲ್ಲಿರುವುದು ಮುಕ್ತಾಯವಾದ ಕೂಡಲೇ ಕೊನೆಗೊಳ್ಳತಕ್ಕದು.

(2) ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಯಾವನೇ ಸದಸ್ಯನು ಕೇಂದ್ರ ಸರ್ಕಾರಕ್ಕೆ ಲಿಖಿತ ನೋಟೀಸನ್ನು ಕೊಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು, ಮತ್ತು ಕೇಂದ್ರ ಸರ್ಕಾರವು ಅಂಥ ರಾಜೀನಾಮೆಯನ್ನು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸಿದ ಮೇಲೆ ಅವನು ತನ್ನ ಪದವನ್ನು ತೆರವು ಮಾಡಿರುವನೆಂದು ಭಾವಿಸತಕ್ಕದ್ದು.

(3) ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಸದಸ್ಯನು (2)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ರಾಜೀನಾಮೆಯಿಂದ ಅಥವಾ ಇತರ ಯಾವುದೇ ಕಾರಣದಿಂದ ಉಂಟಾದ ಆಕಸ್ಮಿಕ ಖಾಲಿಸ್ಥಾನವನ್ನು, ಸಂದರ್ಭಾನುಸಾರ, ಅವನನ್ನು ನಾಮ ನಿರ್ದೇಶನ ಮಾಡಿದ ಪ್ರಾಧಿಕಾರವು ಹೊಸದಾಗಿ ನಾಮನಿರ್ದೇಶನ ಮಾಡುವ ಮೂಲಕ ಅಥವಾ ಅವನನ್ನು ಚುನಾಯಿಸಿದ ಸದನವು ಅಥವಾ ನಿಕಾಯವು ಹೊಸದಾಗಿ ಚುನಾಯಿಸುವುದರ ಮೂಲಕ ತುಂಬಬಹುದು ಮತ್ತು ಅಂಥ ನಾಮನಿರ್ದೇಶನವನ್ನು ಅಥವಾ ಚುನಾವಣೆಯನ್ನು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತನಾದ ಅಥವಾ ಚುನಾಯಿತನಾದ ಸದಸ್ಯನು, ಅವನು ಯಾವ ಸದಸ್ಯನ ಸ್ಥಾನಕ್ಕೆ ನಾಮನಿರ್ದೇಶಿತನಾಗಿರುವನೋ ಅಥವಾ ಚುನಾಯಿತನಾಗಿರುವನೋ ಆ ಸದಸ್ಯನು ಆ ಪದದಲ್ಲಿ ಉಳಿದ ಎಷ್ಟು ಕಾಲ ಇರಬಹುದಾಗಿತ್ತೋ ಅಷ್ಟರ ವರೆಗೆ ಆ ಪದದಲ್ಲಿ ಇರತಕ್ಕದ್ದು.

(4) ಹೊರ ಹೋಗುವ ಸದಸ್ಯನು ಮರುನಾಮನಿರ್ದೇಶನಕ್ಕೆ ಅಥವಾ ಮರುಚುನಾವಣೆಗೆ ಅರ್ಹನಾಗಿರತಕ್ಕದ್ದು,

(5) ನಾಮನಿರ್ದೇಶಿತನಾದ ಯಾವನೇ ಸದಸ್ಯನು ಅಶಕ್ತತೆಯಿಂದ ಅಥವಾ ಅನ್ಯಥಾ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ತಾತ್ಕಾಲಿಕವಾಗಿ ಅಸಮರ್ಥನಾಗಿದ್ದರೆ ಅಥವಾ ರಜೆಯ ಮೇಲೆ ಅಥವಾ ಅನ್ಯಥಾ ಅವನ ಪದವು ಖಾಲಿಯಾಗಿದೆ ಎನ್ನಲಾಗದ ಇತರ ಸನ್ನಿವೇಶಗಳಲ್ಲಿ ಗೈರು ಹಾಜರಾಗಿದ್ದರೆ, ಅವನನ್ನು ನಾಮನಿರ್ದೇಶನ ಮಾಡಿದ ಪ್ರಾಧಿಕಾರವು ಅವನ ಗೈರುಹಾಜರಿಯ ಕಾಲಾವಧಿಯಲ್ಲಿ ಅವನ ಸ್ಥಾನದಲ್ಲಿ ಅವನ ಕಾರ್ಯವನ್ನು ನಿರ್ವಹಿಸಲು ಇನ್ನೊಬ್ಬ ವ್ಯಕ್ತಿಯನ್ನು ನಾಮ ನಿರ್ದೇಶನ ಮಾಡಬಹುದು,

7. ಸದಸ್ಯನ ಪದವು ಖಾಲಿಯಾಗುವುದು.—ಮಂಡಳಿಯ ಅಥವಾ 11ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಕಾರ್ಯನಿರ್ವಾಹಕ ಪರಿಷತ್ತಿನ ಯಾವನೇ ಸದಸ್ಯನು.—

(ಕ) 5ನೇ ಪ್ರಕರಣದಲ್ಲಿ ನಮೂದಿಸಲಾದ ಅನರ್ಹತೆಗಳಲ್ಲಿ ಯಾವುದಕ್ಕಾದರೂ ಅವನು ಒಳಗಾದರೆ:

ಪರಂತು, ಆ ಪ್ರಕರಣದ (ಘ) ಖಂಡದಲ್ಲಿ ಹೇಳಿದ ಅನರ್ಹತೆಗೆ ಒಳಗಾಗಿರು ವನೆಂಬ ಕಾರಣದ ಮೇಲೆ ಯಾವನೇ ಸದಸ್ಯನನ್ನು, ಆ ವಿಷಯದಲ್ಲಿ ಅವನು ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ತೆಗೆದು ಹಾಕತಕ್ಕದಲ್ಲ ; ಅಥವಾ

(ಖ) ಸಂದರ್ಭಾನುಸಾರ, ಮಂಡಳಿಯ ಅಥವಾ ಕಾರ್ಯನಿರ್ವಾಹಕ ಪರಿಷತ್ತಿನ ಒಂದಾದ ಮೇಲೊಂದು ಬರುವ ಮೂರು ಸಭೆಗಳಿಗೆ, ಗೈರುಹಾಜರಿಗಾಗಿ ಮಂಡಳಿಯ ಅನುಮತಿಯನ್ನು ಪಡೆಯದೆ, ಗೈರು ಹಾಜರಾದರೆ ;

—ಅವನನ್ನು ಕೇಂದ್ರ ಸರ್ಕಾರವು ತೆಗೆದುಹಾಕತಕ್ಕದ್ದು.

8. ಖಾಲಿಸ್ಥಾನಗಳು, ಇತ್ಯಾದಿಗಳು ಕಾರ್ಯಗಳನ್ನು ಅಸಿಂಧುಗೊಳಿಸತಕ್ಕದಲ್ಲ.—ಮಂಡಳಿಯ ಯಾವುದೇ ಕಾರ್ಯವು,—

(ಕ) ಮಂಡಳಿಯಲ್ಲಿ ಉಂಟಾದ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ನ್ಯೂನತೆ ; ಅಥವಾ

(ಖ) ಅದರ ಸದಸ್ಯನಾಗಿ ಕಾರ್ಯವನ್ನು ನಿರ್ವಹಿಸುವ ವ್ಯಕ್ತಿಯ ನಾಮ ನಿರ್ದೇಶನದಲ್ಲಿನ ನ್ಯೂನತೆ ; ಅಥವಾ

(ಗ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಅದರ ಪ್ರಕ್ರಿಯೆಯಲ್ಲಿನ ಅಕ್ರಮ;

—ಇವುಗಳ ಕಾರಣ ಮಾತ್ರದಿಂದ ಅಸಿಂಧುವಾಗತಕ್ಕದಲ್ಲ.

9. ಮಂಡಳಿಯಲ್ಲಿ ತಮಗಿರುವ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಸದಸ್ಯರು ಬಹಿರಂಗಪಡಿಸತಕ್ಕದ್ದು.—ಮಂಡಳಿಯು ಮಾಡಿಕೊಂಡ ಅಥವಾ ಮಾಡಿಕೊಳ್ಳಬೇಕೆಂದು ಉದ್ದೇಶಿಸಿದ ಕರಾರಿನಲ್ಲಿ ಯಾವನೇ ಸದಸ್ಯನು ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಹಿತಾಸಕ್ತಿಯನ್ನು ಹೊಂದಿದ್ದರೆ, ಸಂಬಂಧಪಟ್ಟ ಸನ್ನಿವೇಶಗಳು ತನ್ನ ತಿಳಿವಳಿಕೆಗೆ ಬಂದ ಕೂಡಲೇ ಕಾರ್ಯಸಾಧ್ಯವಾದಷ್ಟು ಬೇಗನೆ, ಮಂಡಳಿಯ ಸಭೆಯಲ್ಲಿ ತನ್ನ ಹಿತಾಸಕ್ತಿಯ ಸ್ವರೂಪವನ್ನು ಬಹಿರಂಗಪಡಿಸತಕ್ಕದ್ದು ಮತ್ತು ಹಾಗೆ ಬಹಿರಂಗಪಡಿಸಿದುದನ್ನು ಮಂಡಳಿಯ ನಡವಳಿಕೆಗಳಲ್ಲಿ ಅಭಿಲೇಖಿಸತಕ್ಕದ್ದು ಮತ್ತು ಹಾಗೆ ಬಹಿರಂಗಪಡಿಸಿದ ಅನಂತರ ಆ ಕರಾರಿಗೆ ಸಂಬಂಧಿಸಿದ ಮಂಡಳಿಯ ಯಾವುದೇ ಚರ್ಚೆಯಲ್ಲಿ ಅಥವಾ ನಿರ್ಣಯದಲ್ಲಿ ಆ ಸದಸ್ಯನು ಭಾಗವಹಿಸತಕ್ಕದಲ್ಲ.

10. ಮಂಡಳಿಯ ಸಭೆಗಳು.—(1) ಮಂಡಳಿಯು ಸಾಮಾನ್ಯವಾಗಿ ಗ್ರಂಥಾಲಯದ ಆವರಣಗಳಲ್ಲಿ ವರ್ಷಕ್ಕೆ ಕನಿಷ್ಠ ಪಕ್ಷ ಎರಡು ಸಾರೆ ಸಭೆ ನಡೆಸತಕ್ಕದ್ದು ಮತ್ತು ಅಂಥ ಸಭೆಗಳಲ್ಲಿನ ಕೋರಮ್‌ನ್ನೂ ಒಳಗೊಂಡಂತೆ, ತನ್ನ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ (2)ನೇ, (3)ನೇ ಮತ್ತು (4)ನೇ ಉಪ-ಪ್ರಕರಣಗಳ ಉಪ-ಬಂಧಗಳಿಗೆ ಒಳಪಟ್ಟು ಈ ಅಧಿನಿಯಮದ ಮೇರೆಗೆ ಮಾಡಬಹುದಾದಂಥ ವಿನಿಯಮಗಳು ಉಪಬಂಧಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಅನುಸರಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಹಾಜರಿರುವ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಯಾವನೇ ಸದಸ್ಯನು ಸಭೆಯ ಅಧ್ಯಕ್ಷತೆಯನ್ನು ವಹಿಸ ತಕ್ಕದ್ದು.

(3) ಸರ್ಕಾರದ ಅಧಿಕಾರಿಯಾಗಿರುವ ಯಾವನೇ ಸದಸ್ಯನಿಗೆ ಮಂಡಳಿಯ ಯಾವುದೇ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ ಅವನು, ಅಧ್ಯಕ್ಷನ ಪೂರ್ವಾನುಮತಿಯನ್ನು ಪಡೆದು, ಭಾರತ ಸರ್ಕಾರದ ಉಪ-ಕಾರ್ಯದರ್ಶಿಯ ದರ್ಜೆಗೆ ಕಡಮೆಯಿರದ ಮಂತ್ರಾಲಯದ ಅಥವಾ ಇಲಾಖೆಯ ಒಬ್ಬ ಅಧಿಕಾರಿಯನ್ನು ಅಂಥ ಸಭೆಗಳಿಗೆ ಹಾಜರಾಗಲು ಬರಹರೂಪದಲ್ಲಿ ಪ್ರಾಧಿಕೃತಗೊಳಿಸಬಹುದು.

(4) ಮಂಡಳಿಯ ಸಭೆಯಲ್ಲಿನ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದ ಮೇರೆಗೆ ನಿರ್ಣಯಿಸತಕ್ಕದ್ದು ಮತ್ತು ಮತಗಳು ಸಮವಾಗಿ ಬಂದ ಸಂದರ್ಭದಲ್ಲಿ ಅಧ್ಯಕ್ಷನು, ಅಥವಾ ಅವನ ಗೈರುಹಾಜರಿಯಲ್ಲಿ, ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಸದಸ್ಯನು, ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

11. ಕಾರ್ಯನಿರ್ವಾಹಕ ಪರಿಷತ್ತು.—(1) ಮಂಡಳಿಗೆ ಒಂಬತ್ತು ಸದಸ್ಯರನ್ನೊಳಗೊಂಡ ಒಂದು ಕಾರ್ಯನಿರ್ವಾಹಕ ಪರಿಷತ್ತು ಇರತಕ್ಕದ್ದು.

(2) ಗ್ರಂಥಾಲಯ ನಿರ್ದೇಶಕನು ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷನಾಗಿರತಕ್ಕದ್ದು ಮತ್ತು ಅದರ ಇತರ ಸದಸ್ಯರನ್ನು ಮಂಡಳಿಯು ಭಾಗಶಃ ತನ್ನ ಸದಸ್ಯರೊಳಗಿಂದ ಮತ್ತು ಭಾಗಶಃ ಹೊರಗಿನವರಿಂದ ನೇಮಿಸತಕ್ಕದ್ದು:

ಪರಂತು, ಹಣಕಾಸಿನ ಬಗ್ಗೆ ವ್ಯವಹರಿಸುವ ಕೇಂದ್ರ ಸರ್ಕಾರದ ಮಂತ್ರಾಲಯದಿಂದ ಒಬ್ಬ ಪ್ರತಿನಿಧಿಯು ಮತ್ತು ಗ್ರಂಥಾಲಯದ ಬಗ್ಗೆ ವ್ಯವಹರಿಸುವ ಕೇಂದ್ರ ಸರ್ಕಾರದ ಇಲಾಖೆಯಿಂದ ಒಬ್ಬ ಪ್ರತಿನಿಧಿಯು ಮತ್ತು ಪಶ್ಚಿಮ ಬಂಗಾಳ ಸರ್ಕಾರದ ಒಬ್ಬ ಪ್ರತಿನಿಧಿಯು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾಗಿರತಕ್ಕದ್ದು :

ಮತ್ತೂ ಪರಂತು, ಈ ಹಿಂದಿನ ಪರಂತುಕದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಮೂವರು ವ್ಯಕ್ತಿಗಳಿಗಿಂತ ಹೆಚ್ಚಾಗಿ ಹೊರಗಿನಿಂದ ನೇಮಿಸತಕ್ಕದ್ದಲ್ಲ.

(3) ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮಂಡಳಿಯು ಚಲಾಯಿಸುವಲ್ಲಿ ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಅದಕ್ಕೆ ಸಹಾಯ ಮಾಡತಕ್ಕದ್ದು, ಮತ್ತು ಮಂಡಳಿಯ ಅಧಿಕಾರಗಳಲ್ಲಿ ಅಥವಾ ಕರ್ತವ್ಯಗಳಲ್ಲಿ ನಿರೂಪಿಸಬಹುದಾದಂಥವುಗಳನ್ನು ಅಥವಾ ಮಂಡಳಿಯು ಪ್ರತ್ಯಾಯೋಜಿಸಬಹುದಾದಂಥವುಗಳನ್ನು, ಆ ಮಂಡಳಿಯು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಪರಿಷತ್ತು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(4) ಮಂಡಳಿಯ ಪೂರ್ವಾನುಮತಿಯನ್ನು ಪಡೆದು, ಮಂಡಳಿಯ ಅಧಿಕಾರಿಗಳ ಮತ್ತು ಇತರ ನಿಯೋಜಿತರ ಯಾವುದೇ ಕುಂದುಕೊರತೆಯನ್ನು ಗಮನಕ್ಕೆ ತೆಗೆದುಕೊಳ್ಳಲು ಮತ್ತು ನ್ಯಾಯ ನಿರ್ಣಯ ಮಾಡಲು ಕಾರ್ಯನಿರ್ವಾಹಕ ಪರಿಷತ್ತು ಸಕ್ಷಮವಾಗಿರಕ್ಕದ್ದು.

(5) ಮಂಡಳಿಯ ಸದಸ್ಯರಾಗಿರದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರ ಪದಾವಧಿಯು ಮಂಡಳಿಯ ಸದಸ್ಯರ ಪದಾವಧಿಯೊಂದಿಗೆ ಕೊನೆಗೊಳ್ಳತಕ್ಕದ್ದು.

12. ವಿಶಿಷ್ಟ ಉದ್ದೇಶಗಳಿಗಾಗಿ ಮಂಡಳಿಯೊಡನೆ ವ್ಯಕ್ತಿಗಳನ್ನು ಹಂಗಾಮಿಯಾಗಿ ಜೊತೆಗೂಡಿಸಿಕೊಳ್ಳುವುದು.—(1) ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳು ಉಪಬಂಧಿಸಬಹುದಾಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾವನೇ ವ್ಯಕ್ತಿಯ ಸಹಾಯವನ್ನು ಅಥವಾ ಸಲಹೆಯನ್ನು ಮಂಡಳಿಯು ಇಚ್ಛಿಸಬಹುದಾದರೆ, ಅದು ಅವನನ್ನು ತನ್ನ ಜೊತೆಗೂಡಿಸಿಕೊಳ್ಳಬಹುದು.

(2) ಮಂಡಳಿಯು (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ಉದ್ದೇಶಕ್ಕಾಗಿ ತನ್ನೊಡನೆ ಜೊತೆಗೂಡಿಸಿಕೊಂಡ ವ್ಯಕ್ತಿಯು, ಆ ಉದ್ದೇಶಕ್ಕೆ ಸಂಬಂಧಿಸಿದ ಮಂಡಳಿಯ ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರತಕ್ಕದ್ದು; ಆದರೆ ಈ ಪ್ರಕರಣದ ಬಲದಿಂದಾಗಿ ಅವನು ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

13. ಮಂಡಳಿಯ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣನ.(1) ಮಂಡಳಿಯ ಎಲ್ಲ ಆದೇಶಗಳನ್ನು ಮತ್ತು ನಿರ್ಣಯಗಳನ್ನು ಅಧ್ಯಕ್ಷನು ಅಥವಾ ಈ ಬಗ್ಗೆ ಮಂಡಳಿಯಿಂದ ಅಧಿಕೃತನಾದ ಯಾವನೇ ಸದಸ್ಯನು ಸಹಿ ಮಾಡುವುದರ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಮಂಡಳಿಯು ಹೊರಡಿಸಿದ ಇತರ ಎಲ್ಲ ಲಿಖಿತಗಳನ್ನು ಆ ಬಗ್ಗೆ ಮಂಡಳಿಯು ಅದೇ ರೀತಿಯಲ್ಲಿ ಅಧಿಕೃತಗೊಳಿಸಿದ ಅಧಿಕಾರಿಯು ಸಹಿ ಮಾಡುವುದರ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತಿನ ಎಲ್ಲ ಆದೇಶಗಳನ್ನು ಮತ್ತು ನಿರ್ಣಯಗಳನ್ನು ಗ್ರಂಥಾಲಯ ನಿರ್ದೇಶಕನ ಸಹಿ ಮಾಡುವುದರ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

14. ಕುಲಾಧ್ಯಕ್ಷ.—(1) ಭಾರತದ ರಾಷ್ಟ್ರಪತಿಯು ಗ್ರಂಥಾಲಯದ ಕುಲಾಧ್ಯಕ್ಷನಾಗಿರತಕ್ಕದ್ದು.

(2) ತಾನು ನಿರ್ದೇಶಿಸಬಹುದಾದಂಥ ವ್ಯಕ್ತಿಯಿಂದ ಅಥವಾ ವ್ಯಕ್ತಿಗಳಿಂದ ಗ್ರಂಥಾಲಯದ ಪರಿಶೀಲನೆಯನ್ನು ಮಾಡಿಸಲು ಅಥವಾ ಗ್ರಂಥಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ಮಾಡಿಸಲು ಕುಲಾಧ್ಯಕ್ಷನು ಹಕ್ಕುಳ್ಳವನಾಗಿರತಕ್ಕದ್ದು.

(3) ಪರಿಶೀಲನೆ ಮಾಡಿಸಬೇಕೆಂಬ ಅಥವಾ ವಿಚಾರಣೆ ಮಾಡಿಸಬೇಕೆಂಬ ತನ್ನ ಉದ್ದೇಶದ ಬಗ್ಗೆ ಕುಲಾಧ್ಯಕ್ಷನು ಪ್ರತಿಯೊಂದು ಸಂದರ್ಭದಲ್ಲಿ ಮಂಡಳಿಗೆ ನೋಟೀಸು ಕೊಡತಕ್ಕದ್ದು ಮತ್ತು ಅಂಥ ಪರಿಶೀಲನೆಯ ಅಥವಾ ವಿಚಾರಣೆಯ ಸಮಯದಲ್ಲಿ ಹಾಜರಿರಲು ಹಾಗು ಅಹವಾಲನ್ನು ಹೇಳಿಕೊಳ್ಳಲು ಒಬ್ಬ ಪ್ರತಿನಿಧಿಯನ್ನು ನೇಮಿಸಲು ಮಂಡಳಿಯು ಹಕ್ಕುಳ್ಳದ್ದಾಗಿರತಕ್ಕದ್ದು.

(4) ಅಂಥ ಪರಿಶೀಲನೆಯ ಅಥವಾ ವಿಚಾರಣೆಯ ಫಲಿತಾಂಶಕ್ಕೆ ಸಂಬಂಧಿಸಿ, ಕುಲಾಧ್ಯಕ್ಷನು ಅಧ್ಯಕ್ಷನಿಗೆ ಬರೆಯಬಹುದು, ಮತ್ತು ಕುಲಾಧ್ಯಕ್ಷನ ಅಭಿಪ್ರಾಯಗಳನ್ನು ಆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮವನ್ನು ಕುರಿತು ಅವನು ಕೊಟ್ಟಿರಬಹುದಾದಂಥ ಸಲಹೆಯನ್ನು ಅಧ್ಯಕ್ಷನು ಮಂಡಳಿಗೆ ತಿಳಿಸತಕ್ಕದ್ದು.

(5) ಅಂಥ ಪರಿಶೀಲನೆಯ ಅಥವಾ ವಿಚಾರಣೆಯ ಫಲಿತಾಂಶದ ಮೇಲೆ ತಾನು ತೆಗೆದುಕೊಳ್ಳಲು ಉದ್ದೇಶಿಸಿರುವಂಥ ಕ್ರಮವು ಯಾವುದಾದರೂ ಇದ್ದರೆ, ಅದನ್ನು ಅಥವಾ ತೆಗೆದುಕೊಳ್ಳಲಾದಂಥ ಕ್ರಮವನ್ನು ಮಂಡಳಿಯು ಅಧ್ಯಕ್ಷನ ಮೂಲಕ ಕುಲಾಧ್ಯಕ್ಷನಿಗೆ ತಿಳಿಸತಕ್ಕದ್ದು.

(6) ಕುಲಾಧ್ಯಕ್ಷನಿಗೆ ಸಮಾಧಾನವಾಗುವಂಥ ಯಾವುದೇ ಕ್ರಮವನ್ನು ಮಂಡಳಿಯು ಯುಕ್ತ ಕಾಲದಲ್ಲಿ ತೆಗೆದುಕೊಳ್ಳದಿದ್ದರೆ, ಮಂಡಳಿಯು ಕೊಟ್ಟ ಯಾವುದೇ ವಿವರಣೆಯನ್ನು ಅಥವಾ ಮಾಡಿದ ಯಾವುದೇ ಮನವಿಯನ್ನು ಪರ್ಯಾಲೋಚಿಸಿದ ಅನಂತರ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ನಿರ್ದೇಶವನ್ನು ಕುಲಾಧ್ಯಕ್ಷನು ಕೊಡಬಹುದು ಮತ್ತು ಅಂಥ ನಿರ್ದೇಶವನ್ನು ಪಾಲಿಸಲು ಮಂಡಳಿಯು ಬದ್ಧವಾಗಿರತಕ್ಕದ್ದು.

(7) ಈ ಪ್ರಕರಣದಲ್ಲಿ ಹಿಂದೆ ಹೇಳಿದ ಉಪ ಪ್ರಬಂಧಗಳಿಗೆತಿಕೂಲವಾಗದಂತೆ, ಈ ಅಧಿನಿಯಮದ ಅಥವಾ ಇದರ ಮೇರೆಗೆ ರಚಿಸಲಾದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳಿಗೆ ಅನುಗುಣವಾಗಿರದ, ಮಂಡಳಿಯ ಯಾವುವೇ ವ್ಯವಹರಣೆಗಳನ್ನು ಲಿಖಿತ ಆದೇಶದ ಮೂಲಕ ಕುಲಾಧ್ಯಕ್ಷನು ರದ್ದು ಮಾಡಬಹುದು ಅಥವಾ ತಡೆಹಿಡಿಯಬಹುದು:

ಪರಂತು, ಈ ವಿಷಯದಲ್ಲಿ ಮನವಿ ಮಾಡಿಕೊಳ್ಳಲು ಮಂಡಳಿಗೆ ಯುಕ್ತ ಅವಕಾಶವನ್ನು ಕೊಟ್ಟಿರುವ ಹೊರತು, ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

15. ಗ್ರಂಥಾಲಯದ ನಿರ್ದೇಶಕ.—(1) ವಿಶೇಷ ವಿದ್ವತ್ತುಳ್ಳ ವ್ಯಕ್ತಿಯನ್ನು ಅಥವಾ ಉನ್ನತ ವಿದ್ಯಾರ್ಹತೆಯುಳ್ಳ ಗ್ರಂಥಾಲಯಾಧಿಕಾರಿಯನ್ನು ಗ್ರಂಥಾಲಯದ ನಿರ್ದೇಶಕನನ್ನಾಗಿ, ನಿಯಮಿಸಬಹುದಾದಂಥ ರೀತಿಯಲ್ಲಿ ಕುಲಾಧ್ಯಕ್ಷನು ನೇಮಿಸತಕ್ಕದ್ದು.

(2) ನಿರ್ದೇಶಕನ ಪದಾವಧಿಯು ಅವನು ಅಧಿಕಾರವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳವರೆಗೆ ಅಥವಾ ಅವನಿಗೆ ಅರವತ್ತು ವರ್ಷಗಳು ತುಂಬುವ ವರೆಗೆ, ಇವುಗಳಲ್ಲಿ ಯಾವುದು ತರುವಾಯದ್ದೋ ಅದು ಆಗಿರತಕ್ಕದ್ದು :

ಪರಂತು, ಯಾವನೇ ವ್ಯಕ್ತಿಯು ಅವನಿಗೆ ಅರವತ್ತೈದು ವರ್ಷಗಳು ತುಂಬಿದ ಅನಂತರ ನಿರ್ದೇಶಕನಅಧಿಕಾರ ಪದದಲ್ಲಿ ಇರತಕ್ಕದ್ದಲ್ಲ.

(3) ನಿಯಮಿಸಬಹುದಾದಂಥ ಸಂಬಳಕ್ಕೆ ಮತ್ತು ಭತ್ಯಗಳಿಗೆ ನಿರ್ದೇಶಕನು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಇತರ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

(4) ನಿರ್ದೇಶಕನಾಗಿ ನೇಮಿತನಾದ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಹಾಗೆ ಅಧಿಕಾರವನ್ನು ಹೊಂದಿರು ವ್ಯಕ್ತಿಯನ್ನು ಈ ಪ್ರಕರಣದ ಮೇರೆಗೆ ನೇಮಿತನಾದವನೆಂದು ಭಾವಿಸತಕ್ಕದ್ದು ಮತ್ತು ಅದರ ಉಪಬಂಧಗಳು ತದನುಸಾರವಾಗಿ ಅವನಿಗೆ ಅನ್ವಯಿಸತಕ್ಕದ್ದು.

16. ಮಂಡಳಿಯ ಸಿಬ್ಬಂದಿ.—(1) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ದಕ್ಷವಾಗಿ ನಿರ್ವಹಿಸುವುದಕ್ಕೆ ಅನುಕೂಲಮಾಡಿಕೊಳ್ಳುವ ಉದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನಿಯೋಜಿತರನ್ನು ಮಂಡಲಿಯು ನೇಮಿಸಿಕೊಳ್ಳಬಹುದು ಮತ್ತು ಅಂಥ ನೇಮಕಗಳನ್ನು ಮಾಡುವಲ್ಲಿ ಸಂಘದ ಸೇವೆಗಳಲ್ಲಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇವೆಗಳಲ್ಲಿ ಮೀಸಲಿಡುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕೇಂದ್ರ ಸರ್ಕಾರದ ಆದೇಶಗಳಿಗೆ ಅನುಗುಣವಾಗಿ ಮಂಡಳಿಯು ಕಾರ್ಯಮಾಡತಕ್ಕದ್ದು.

(2) ಅಂಥ ಅಧಿಕಾರಿಗಳ ಮತ್ತು ಇತರ ನಿಯೋಜಿತರ ಸೇವಾ ಭರ್ತಿ ಮತ್ತು ಸೇವಾ ಷರತ್ತುಗಳು ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥವುಗಳಾಗಿರತಕ್ಕದ್ದು.

(3) ಪ್ರತಿನಿಯೋಗದ ಮೇಲೆ ನೇಮಕ ಮಾಡಲಾದ ಅಧಿಕಾರಿಯಾಗಿರದ ಅಥವಾ ಇತರ ನೌಕರನಾಗಿರದ, ಮಂಡಳಿಯ ಪ್ರತಿಯೊಬ್ಬ ಅಧಿಕಾರಿಯನ್ನು ಅಥವಾ ಇತರ ನಿಯೋಜಿತರನ್ನು ಲಿಖಿತ ಕರಾರಿನ ಮೇಲೆ ನೇಮಿಸತಕ್ಕದ್ದು ಮತ್ತು ಅದನ್ನು ಮಂಡಲಿಯಲ್ಲಿ ಇಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಸಂಬಂಧಪಟ್ಟ ನೌಕರನಿಗೆ ಕೊಡತಕ್ಕದ್ದು.

(4) ಮಂಡಲಿಯ ಮತ್ತು ಪ್ರತಿನಿಯೋಗದ ಮೇಲೆ ನೇಮಕಮಾಡಲಾದ ಅಧಿಕಾರಿಯಾಗಿರದ ಅಥವಾ ಇತರ ನೌಕರನಾಗಿರದ, ಅದರ ಅಧಿಕಾರಿಗಳ ಅಥವಾ ಇತರ ನೌಕರರ ನಡುವಿನ ಕರಾರಿನಿಂದ ಉಂಟಾದ ಯಾವುದೇ ವಿವಾದವನ್ನು, ಸಂಬಂಧಿಸಿದ ನೌಕರನ ವಿನಂತಿಯ ಮೇಲೆ ಅಥವಾ ಮಂಡಳಿಯ ಕೋರಿಕೆಯ ಮೇಲೆ, ಮಂಡಳಿಯು ನೇಮಿಸಿದ ಒಬ್ಬ ಸದಸ್ಯನನ್ನು, ನೌಕರನು ನಾಮನಿರ್ದೇಶಿಸಿದ ಒಬ್ಬ ಸದಸ್ಯನನ್ನು ಮತ್ತು ಕುಲಾಧ್ಯಕ್ಷನು ನೇಮಿಸಿದ ಒಬ್ಬನಿರ್ಣಯಕಾರನನ್ನು ಒಳಗೊಂಡ ಮಧ್ಯಸ್ಥಗಾರಿಕೆ ನ್ಯಾಯಾಧಿಕರಣಕ್ಕೆ ಒಪ್ಪಿಸತಕ್ಕದ್ದು.

(5) ಮಧ್ಯಸ್ಥಗಾರಿಕೆ ನ್ಯಾಯಾಧಿಕರಣದ ನಿರ್ಣಯವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(6) 4ನೇ ಉಪನಿಯಮವು ಮಧ್ಯಸ್ಥಗಾರಿಕೆ ನ್ಯಾಯಾಧಿಕರಣಕ್ಕೆ ಒಪ್ಪಿಸಬೇಕೆಂದು ಅಗತ್ಯಪಡಿಸಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(7) ತನ್ನ ಪ್ರಕ್ರಿಯೆಯನ್ನು ನಿಯಂತ್ರಿಸಲು ಮಧ್ಯಸ್ಥಗಾರಿಕೆ ನ್ಯಾಯಾಧಿಕರಣಕ್ಕೆ ಅಧಿಕಾರವಿರತಕ್ಕದ್ದು.

(8) ಮಧ್ಯಸ್ಥಗಾರಿಕೆಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಅದು ಈ ಪ್ರಕರಣದ ಮೇರೆಗಿನ ಮಧ್ಯಸ್ಥಗಾರಿಕೆಗಳಿಗೆ ಅನ್ವಯಿಸತಕ್ಕದ್ದಲ್ಲ.

17. ಈಗ ಇರುವ ನೌಕರರ ಸೇವೆಯನ್ನು ಮಂಡಳಿಗೆ ವರ್ಗಾಯಿಸುವುದು.—(1) ಮಂಡಳಿಯು ಸ್ಥಾಪನೆಯಾದ ಮೇಲೆ, ಗ್ರಂಥಾಲಯದಲ್ಲಿ ಸೇವೆಸಲ್ಲಿಸುತ್ತಿರುವ ಅಧಿಕಾರಿಗಳಲ್ಲಿ ಅಥವಾ ಇತರ ನೌಕರರಲ್ಲಿ ಯಾರನ್ನಾದರೂ ಕೇಂದ್ರ ಸರ್ಕಾರವು ಆದೇಶದ ಮೂಲಕ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ದಿನಾಂಕದಿಂದ ಅಥವಾ ದಿನಾಂಕಗಳಿಂದ ಪರಿಣಾಮಕಾರಿಯಾಗುವಂತೆ, ಮಂಡಳಿಗೆ ವರ್ಗಾಯಿಸುವುದು ಕಾನೂನು ಬದ್ಧವಾಗಿರತಕ್ಕದ್ದು:

ಪರಂತು, ಯಾವನೇ ಅಧಿಕಾರಿಯು ಅಥವಾ ಇತರ ನಿಯೋಜಿತನು ತನ್ನನ್ನು ಮಂಡಳಿಗೆ ವರ್ಗಾಯಿಸಬೇಕೆಂಬ ಕೇಂದ್ರ ಸರ್ಕಾರದ ಪ್ರಸ್ತಾಪದ ಬಗ್ಗೆ ಆ ಮಂಡಳಿಯ ನಿಯೋಜಿತನಾಗುವುದಿಲ್ಲವೆಂಬ ತನ್ನ ಉದ್ದೇಶವನ್ನು ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ತಿಳಿಸಿದರೆ, ಈ ಉಪ-ಪ್ರಕರಣದ ಮೇರೆಗೆ ಅವನ ಬಗ್ಗೆ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ವರ್ಗಾಯಿತನಾದ ಅಧಿಕಾರಿಯು ಅಥವಾ ಇತರ ನಿಯೋಜಿತನು, ಅಂಥ ವರ್ಗಾವಣೆಯ ದಿನಾಂಕದಂದು ಮತ್ತು ದಿನಾಂಕದಿಂದ, ಕೇಂದ್ರ ಸರ್ಕಾರದ ನಿಯೋಜಿತನಾಗಿರುವುದು ಮುಕ್ತಾಯಗೊಳ್ಳತಕ್ಕದ್ದು, ಮತ್ತು ಮಂಡಳಿಯು ನಿರ್ಧರಿಸಬಹುದಾಂಥ ಪದನಾಮದಿಂದ ಮಂಡಳಿಯ ನಿಯೋಜಿತನಾಗತಕ್ಕದ್ದು ಮತ್ತು (3)ನೇ, (4)ನೇ ಮತ್ತು (5)ನೇ ಉಪ-ಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು, ನಿವೃತ್ತಿ ವೇತನ, ರಜೆ ಮತ್ತು ಭವಿಷ್ಯನಿಧಿ—ಇವುಗಳು ಒಳಗೊಂಡಂತೆ ಪರಿಶ್ರಮಧನಕ್ಕೆ ಮತ್ತು ಇತರ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ಮಂಡಳಿಯು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳಿಂದ ನಿಯಂತ್ರಿತನಾಗತಕ್ಕದ್ದು ಮತ್ತು ಮಂಡಳಿಯು ಅವನ ನೌಕರಿಯನ್ನು ಕೊನೆಗೊಳಿಸಿದ ಹೊರತು ಮತ್ತು ಕೊನೆಗೊಳಿಸುವವರೆಗೆ ಅವನು ಮಂಡಳಿಯ ನಿಯೋಜಿತನಾಗಿಮುಂದುವರಿಯತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ವರ್ಗಾಯಿತನಾದ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನಿಯೋಜಿತನು, ಅಂಥ ದಿನಾಂಕದಿಂದ ಆರು ತಿಂಗಳೊಳಗಾಗಿ,—

(ಕ) ಮಂಡಳಿಯು ಸ್ಥಾಪನೆಯಾಗುವುದಕ್ಕೆ ನಿಕಟಪೂರ್ವದಲ್ಲಿ ಸರ್ಕಾರದಲ್ಲಿ ತಾನು ಹೊಂದಿದ್ದ ಹುದ್ದೆಗೆ ಅನ್ವಯಿಸುತ್ತಿದ್ದ ವೇತನ ಶ್ರೇಣಿಯಿಂದ ಅಥವಾ ಅವನು ವರ್ಗಾಯಿತನಾಗಿರುವ ಮಂಡಳಿಯ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಯಿಂದ ;

(ಖ) ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಇರುವ ಕೇಂದ್ರ ಸರ್ಕಾರದ ನಿಯಮಗಳಿಗೆ ಮತ್ತು ಆದೇಶಗಳಿಗೆ ಅನುಸಾರವಾಗಿ ಕೇಂದ್ರ ಸರ್ಕಾರದ ನಿಯೋಜಿತರಿಗೆ ಲಭ್ಯವಿರುವ ರಜೆ, ಭವಿಷ್ಯನಿಧಿ, ನಿವೃತ್ತಿಯ ಅಥವಾ ಇತರ ಸೇವಾಂತ ಪ್ರಯೋಜನಗಳು—ಇವುಗಳಿಂದ ಅಥವಾ ಮಂಡಳಿಯು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳ ಮೇರೆಗೆ ಮಂಡಳಿಯ ನಿಯೋಜಿತನಿಗೆ ಲಭ್ಯವಿರುವ ರಜೆ, ಭವಿಷ್ಯನಿಧಿ, ಅಥವಾ ಇತರ ಸೇವಾಂತ ಪ್ರಯೋಜನಗಳಿಂದ;

—ನಿಯಂತ್ರಿತನಾಗುತ್ತೇನೆ ಎಂಬ ಬಗ್ಗೆ ತನ್ನ ಆಯ್ಕೆಯನ್ನು ಲಿಖಿತದಲ್ಲಿ ಮಾಡತಕ್ಕುದು, ಮತ್ತು ಹಾಗೆ ಒಮ್ಮೆ ಮಾಡಿದ ಆಯ್ಕೆಯು ಅಂತಿಮವಾದುದಾಗಿರತಕ್ಕುದು:

ಪರಂತು, ಹಾಗೆ (ಕ) ಖಂಡದ ಮೇರೆಗೆ ಮಾಡಿದ ಆಯ್ಕೆಯು ಅಂಥ ವ್ಯಕ್ತಿಯು ಮಂಡಳಿಯ ಯಾವ ಹುದ್ದೆಗೆ ವರ್ಗಾಯಿತನಾಗಿದ್ದಾನೋ ಆ ಹುದ್ದೆಗೆ ಸಂಬಂಧಿಸಿ ಮಾತ್ರ ಅನ್ವಯಿಸತಕ್ಕುದು ಮತ್ತು ಮಂಡಳಿಯಲ್ಲಿ ಅದಕ್ಕಿಂತ ಯಾವುದೇ ಮೇಲಿನ ಹುದ್ದೆಗೆ ನೇಮಿತನಾದಾಗ, ಅಂಥ ಮೇಲಿನ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಗೆಮಾತ್ರ ಅವನು ಅರ್ಹನಾಗತಕ್ಕುದು :

ಮತ್ತೂ ಪರಂತು, ಅಂಥ ಯಾವನೇ ವ್ಯಕ್ತಿಯು ಹಾಗೆ ವರ್ಗಾಯಿತನಾದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಸರ್ಕಾರದಲ್ಲಿ ರಜಾ ಖಾಲಿ ಸ್ಥಾನದಲ್ಲಾಗಲಿ ಅಥವಾ ನಿರ್ದಿಷ್ಟ ಅವಧಿಯ ಇತರ ಯಾವುದೇ ಖಾಲಿ ಸ್ಥಾನದಲ್ಲಾಗಲಿ ಕಾರ್ಯ ನಿರ್ವಹಿಸುತ್ತಿದ್ದರೆ, ಹಾಗೆ ವರ್ಗಾವಣೆಯಾದ ಮೇಲೆ, ಅಂಥ ಖಾಲಿ ಸ್ಥಾನದಲ್ಲಿನ ಉಳಿದ ಅವಧಿಯವರೆಗೆ ಅವನ ವೇತನವನ್ನು ಸಂರಕ್ಷಿಸತಕ್ಕುದು ಮತ್ತು ತದನಂತರ ಆವನು ಸರ್ಕಾರದಲ್ಲಿ ಯಾವ ಹುದ್ದೆಗೆ ಹಿಂದಿರುಗಬೇಕಾಗಿತ್ತೋ ಆ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಗೆ ಅಥವಾ ಮಂಡಳಿಯ ಯಾವ ಹುದ್ದೆಗೆ ಅವನು ವರ್ಗಾಯಿತನಾದನೋ ಆ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಗೆ ಹಕ್ಕುಳ್ಳವನಾಗಿರತಕ್ಕುದು ಮತ್ತು ಇವುಗಳಲ್ಲಿ ಯಾವುದನ್ನಾದರೂ ಅವನು ಆಯ್ಕೆ ಮಾಡಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ವರ್ಗಾಯಿತನಾದ ಯಾವನೇ ಅಧಿಕಾರಿ ಅಥವಾ ಇತರ ನೌಕರನನ್ನು—

(ಕ) ಮಂಡಳಿಯು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದ ರೀತಿಯನ್ನು ಅಥವಾ ಅದಕ್ಕೆ ಸಮಾನವಾದ ನೇಮಕವನ್ನು ಮಂಡಳಿಯಲ್ಲಿ ಮಾಡಲು ಸಕ್ಷಮವಾಗಿರುವ ಪ್ರಾಧಿಕಾರಕ್ಕೆ ಅಧೀನವಾಗಿರುವ ಯಾವುದೇ ಪ್ರಾಧಿಕಾರವು ವಜಾ ಮಾಡತಕ್ಕುದಲ್ಲ ಅಥವಾ ತೆಗೆದುಹಾಕತಕ್ಕುದಲ್ಲ.

(ಖ) ಅವನ ವಿರುದ್ಧವಾಗಿ ಇರುವ ಆರೋಪಗಳನ್ನು ಅವನಿಗೆ ತಿಳಿಸಿ ಅವುಗಳಿಗೆ ಸಂಬಂಧಿಸಿದಂತೆ ಅವನು ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶಕೊಟ್ಟು ವಿಚಾರಣೆಯನ್ನು ಮಾಡಿದ ಅನಂತರವಲ್ಲದೆ, ಮತ್ತು ಅಂಥ ವಿಚಾರಣೆಯ ಅನಂತರ, ಅವನಿಗೆ ಯಾವುದೇ ದಂಡವನ್ನು ವಿಧಿಸಲು ಉದ್ದೇಶಿಸಲಾಗಿದ್ದಲ್ಲಿ, ಹಾಗೆ ವಿಧಿಸಲು ಉದ್ದೇಶಿಸಲಾಗಿರುವ ದಂಡದ ಬಗ್ಗೆ, ಅಂಥ ವಿಚಾರಣೆಯಲ್ಲಿ ಮಂಡಿಸಲಾದ ಸಾಕ್ಷ್ಯದ ಆಧಾರದ ಮೇಲೆ ಮಾತ್ರ ಅವನು ತನ್ನ ಮನವಿಯನ್ನು ಸಲ್ಲಿಸಲು ಅವನಿಗೆ ಯುಕ್ತ ಅವಕಾಶವನ್ನು ಕೊಟ್ಟಲ್ಲದೆ, ವಜಾ ಮಾಡತಕ್ಕುದಲ್ಲ ಅಥವಾ ತೆಗೆದುಹಾಕತಕ್ಕುದಲ್ಲ ಅಥವಾ ಅವನ ದರ್ಜೆಯನ್ನು ಇಳಿಸತಕ್ಕುದಲ್ಲ:

ಪರಂತು, ಈ ಖಂಡವು,—

(i) ಕ್ರಿಮಿನಲ್ ಆರೋಪದ ಮೇಲೆ ಅಪರಾಧಿಯೆಂದು ನಿರ್ಣಯಿಸಲು ಕಾರಣವಾದ ನಡತೆಯ ಆಧಾರದ ಮೇಲೆ ಯಾವನೇ ಅಧಿಕಾರಿಯನ್ನು ಅಥವಾ ಇತರ ನೌಕರರನ್ನು ವಜಾ ಮಾಡಿರುವಲ್ಲಿ ಅಥವಾ ತೆಗೆದು ಹಾಕಿರುವಲ್ಲಿ ಅವನ ದರ್ಜೆಯನ್ನು ಇಳಿಸಿರುವಲ್ಲಿ ; ಅಥವಾ

(ii) ಯಾವನೇ ಅಧಿಕಾರಿಯನ್ನು ಅಥವಾ ಇತರ ನೌಕರನನ್ನು ವಜಾ ಮಾಡಲು ಅಥವಾ ತೆಗೆದು ಹಾಕಲು ಅಥವಾ ಅವನ ದರ್ಜೆಯನ್ನು ಇಳಿಸಲು ಅಧಿಕಾರವುಳ್ಳ ಪ್ರಾಧಿಕಾರಕ್ಕೆ ತಾನು ಲಿಖಿತದಲ್ಲಿ ಅಭಿಲೇಖಿಸಬೇಕಾದ ಯಾವುದೇ ಕಾರಣಕ್ಕಾಗಿ ಅಂಥ ವಿವರಣೆಯನ್ನು ನಡೆಸುವುದು ಸಕಾರಣವಾಗಿ ಕಾರ್ಯಸಾಧ್ಯವಲ್ಲವೆಂದು ಮನದಟ್ಟಾದಲ್ಲಿ ; ಅಥವಾ

(iii) ಮಂಡಳಿಗೆ ವರ್ಗಾಯಿತನಾದ ಅನಂತರ, ಬಹಿರಂಗ ಜಾಹೀರಾತಿನ ಮೇರೆಗೆ ಮತ್ತು ಹೊರಗಿನ ಸ್ಪರ್ಧಿಗಳೊಂದಿಗೆ ಸ್ಪರ್ಧಿಸಿ ಮಂಡಳಿಯಲ್ಲಿನ ಮೇಲಿನ ಹುದ್ದೆಗೆ ನೇಮಿತನಾದ ಯಾವನೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ ;

—ಅನ್ವಯಿಸತಕ್ಕುದಲ್ಲ.

(5) ಮೇಲೆ ಹೇಳಿದಂಥ ಯಾವನೇ ಅಧಿಕಾರಿಗೆ ಅಥವಾ ಇತರ ನೌಕರನಿಗೆ ಸಂಬಂಧಿಸಿ, (4)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದಂಥ ವಿಚಾರಣೆಯನ್ನು ನಡೆಸುವುದು ಸಕಾರಣವಾಗಿ ಕಾರ್ಯಸಾಧ್ಯವೇ ಎಂಬ ಬಗ್ಗೆ ಪ್ರಶ್ನೆಯು ಉದ್ಭವಿಸಿದರೆ, ಅವನನ್ನು ವಜಾಮಾಡಲು ಅಥವಾ ತೆಗೆದು ಹಾಕಲು ಅಥವಾ ಕೆಳಗಿನ ದರ್ಜೆಗೆ ಇಳಿಸಲು ಅಧಿಕಾರವುಳ್ಳ ಪ್ರಾಧಿಕಾರದ ತೀರ್ಮಾನವು ಆ ಬಗ್ಗೆ ಅಂತಿಮವಾದುದಾಗಿರತಕ್ಕುದು.

18. ಗ್ರಂಥಾಲಯವನ್ನು "ಭಾರತ ರಾಷ್ಟ್ರೀಯ ಗ್ರಂಥಾಲಯ" ಎಂದು ಕರೆಯತಕ್ಕುದು ಮತ್ತು ಗ್ರಂಥಾಲಯದ ಸ್ಥಳ :—(1) ಈ ಅಧಿನಿಯಮವು ಪ್ರಾರಂಭವಾದಂದು ಮತ್ತು ಅನಂತರ, ಗ್ರಂಥಾಲಯವನ್ನು "ಭಾರತ ರಾಷ್ಟ್ರೀಯ ಗ್ರಂಥಾಲಯ" ಎಂದು ಕರೆಯತಕ್ಕುದು, ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರು ನಾಮೆಯಲ್ಲಿ, ಲಿಖಿತದಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ರಾಷ್ಟ್ರೀಯ ಗ್ರಂಥಾಲಯದ ಬಗ್ಗೆ ಇರುವ ಯಾವುದೇ ಉಲ್ಲೇಖವನ್ನು ಭಾರತ ರಾಷ್ಟ್ರೀಯ ಗ್ರಂಥಾಲಯದ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕುದು.

(2) ಈ ಗ್ರಂಥಾಲಯವು ಕಲ್ಕತ್ತೆಯಲ್ಲಿರುವುದು ಮುಂದುವರಿಯತಕ್ಕುದು.

## ಅಧ್ಯಾಯ—III

### ಮಂಡಳಿಯ ಸ್ವತ್ತು, ಹೊಣೆಗಾರಿಕೆಗಳು ಮತ್ತು ಪ್ರಕಾರ್ಯಗಳು

19. ಮಂಡಳಿಯ ಸ್ವತ್ತು ಮತ್ತು ಹೊಣೆಗಾರಿಕೆಗಳು:—(1) ಮಂಡಳಿಯು ಸ್ಥಾಪನೆಯಾದ ಮೇಲೆ—

(i) ಗ್ರಂಥಾಲಯದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಅದರಿಂದ ವಸೂಲೀಯವಾಗಿರುವ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಬಾಕಿಗಳು ಮಂಡಳಿಯಲ್ಲಿ ನಿಹಿತವಾಗತಕ್ಕುದು, ಮತ್ತು ಅದರಿಂದ ವಸೂಲೀಯವಾಗತಕ್ಕುದು ; ಮತ್ತು

(ii) ಗ್ರಂಥಾಲಯಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರದ ವಿರುದ್ಧವಾಗಿ ಜಾರಿಗೊಳಿಸಬಹುದಾದ ಎಲ್ಲ ಹೊಣೆಗಾರಿಕೆಗಳು ಮಂಡಳಿಯ ವಿರುದ್ಧವಾಗಿ ಮಾತ್ರ ಜಾರಿಗೊಳಿಸುವಂಥವಾಗಿರತಕ್ಕುದು.

(2) ಮಂಡಳಿಯು ಸ್ಥಾಪನೆಯಾದ ಅನಂತರ, ಗ್ರಂಥಾಲಯಕ್ಕೆ ಕೊಡಬಹುದಾದ, ಮರಣ ಶಾಸನದ ಮೂಲಕ ಕೊಡಬಹುದಾದ ಅಥವಾ ಅನ್ಯಥಾ ವರ್ಗಾಯಿತವಾಗಬಹುದಾದ ಅಥವಾ ಮಂಡಳಿಯು ಅರ್ಜಿಸಬಹುದಾದ ಎಲ್ಲ ಸ್ವತ್ತುಗಳೂ ಮಂಡಳಿಯಲ್ಲಿ ನಿಹಿತವಾಗತಕ್ಕುದು.

20. ಮಂಡಳಿಯ ಕರ್ತವ್ಯಗಳು.—(1) ಗ್ರಂಥಾಲಯದ ವ್ಯವಸ್ಥೆಯನ್ನು ನೋಡಿಕೊಳ್ಳುವುದು ಮತ್ತು ಆಧುನಿಕ ವೈಜ್ಞಾನಿಕ ರೀತಿಯಲ್ಲಿ ಗ್ರಂಥಾಲಯದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುವುದು, ಗ್ರಂಥ ಸೂಚಿಗಳನ್ನು, ವರ್ಣನಾತ್ಮಕ ಸೂಚಿಗಳನ್ನು ಸಿದ್ಧಪಡಿಸುವುದನ್ನೂ ಮತ್ತು ಇತರ ವಿಷಯಗಳನ್ನು ಒಳಗೊಂಡಂತೆ, ಗ್ರಂಥಾಲಯಗಳಿಗೆ ಮತ್ತು ಅವುಗಳ ಕಾರ್ಯ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ಕೊಡುವುದು ಮತ್ತು ಕಾಲಕಾಲಕ್ಕೆ ಕೇಂದ್ರ ಸರ್ಕಾರವು ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು—ಮಂಡಳಿಯ ಸಾಮಾನ್ಯ ಕರ್ತವ್ಯವಾಗಿರತಕ್ಕುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧದ ಸಾಮಾನ್ಯಾನ್ವಯಕ್ಕೆ ಬಾಧೆಬಾರದಂತೆ, ಮಂಡಳಿಯು ತಾನು ಸೂಕ್ತವೆಂದು ಆಲೋಚಿಸುವಂಥ ಕೆಳಕಂಡ ಕ್ರಮಗಳನ್ನು ಕೈಕೊಳ್ಳಬಹುದು. :—

(ಕ) ಗ್ರಂಥಾಲಯವನ್ನು ಉಪಯೋಗಿಸಿಕೊಳ್ಳುವಲ್ಲಿ ಸಾರ್ವಜನಿಕರಿಗೆ ಸೇವೆಯನ್ನು ಸಲ್ಲಿಸುವುದು ಮತ್ತು ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳ, ಪುಸ್ತಕಗಳ ಮತ್ತು ಇತರ ವಸ್ತುಗಳ ಸಂಗ್ರಹಗಳನ್ನು ಆಧುನಿಕ ವೈಜ್ಞಾನಿಕ ರೀತಿಯಲ್ಲಿ ಸಂರಕ್ಷಿಸುವುದು ;

(ಖ) ಭಾರತದಲ್ಲಿ ಮುದ್ರಿತವಾದ ಎಲ್ಲ ಮಹತ್ವದ ಉತ್ಪಾದಿತ ಸಾಮಗ್ರಿಯನ್ನು ಭಾರತಕ್ಕೆ ಸಂಬಂಧಿಸಿದ ಎಲ್ಲ ಮುದ್ರಿತ ಸಾಮಗ್ರಿಯನ್ನು ಅದು ಯಾವುದೇ ಸ್ಥಳದಲ್ಲಿ ಪ್ರಕಟವಾಗಿರಲಿ, ಮತ್ತು ರಾಷ್ಟ್ರೀಯ ಮಹತ್ವದ ಹಸ್ತ ಪ್ರತಿಗಳನ್ನು ಆರ್ಜಿಸುವುದು ಮತ್ತು ಸಂರಕ್ಷಿಸುವುದು ;

(ಗ) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, 1954ರ 2ನೇ ಪ್ರಕರಣದ (ಖ) ಖಂಡದ ಅರ್ಥವ್ಯಾಪ್ತಿಯೊಳಗೆ ಬರುವ ಇತರ ಸಾರ್ವಜನಿಕ ಗ್ರಂಥಾಲಯಗಳಿಗೆ ತಾಂತ್ರಿಕ ಸಲಹೆಯನ್ನು ಕೊಡುವುದು;

(ಘ) ಗ್ರಂಥ ಸೂಚಿಗಳ ಪ್ರಕಟಣೆಯನ್ನು ಕೈಕೊಳ್ಳುವುದು ಮತ್ತು ಗ್ರಂಥ ಸೂಚಿಗಳ ಪ್ರಕಟಣೆಯಲ್ಲಿ ಸಂಸ್ಥೆಗಳಿಗೆ ಹಾಗು ವಿದ್ವಾಂಸರಿಗೆ ನೆರವುನೀಡುವುದು ;

(ಙ) ಇತಿಹಾಸ, ಸಾಹಿತ್ಯ, ವಿಜ್ಞಾನ ಮತ್ತು ಅದೇ ಬಗೆಯವುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಚಾರ ಸಂಕಿರಣಗಳನ್ನು ಮತ್ತು ವಿದ್ವದ್ಗೋಷ್ಠಿಗಳನ್ನು ನಡೆಸುವುದಕ್ಕೆ ಸೌಲಭ್ಯಗಳನ್ನು ಒದಗಿಸಿಕೊಡುವುದು ಅಥವಾ ಅವುಗಳನ್ನು ಪ್ರೋತ್ಸಾಹಿಸುವುದು ;

(ಚ) ಸಾರ್ವಜನಿಕರಿಗೆ ಆಸಕ್ತಿ ಉಂಟು ಮಾಡುವಂತಹವೆಂದು ಮಂಡಳಿಯು ಅಭಿಪ್ರಾಯ ಪಡುವಂಥ ಹಸ್ತಪ್ರತಿಗಳ, ಪುಸ್ತಕಗಳ, ಸಾಮಗ್ರಿಗಳ ಅಥವಾ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸುವುದು ;

(ಛ) ಭಾರತದ ಹೊರಗಿನ ದೇಶಗಳೊಂದಿಗೆ ಮತ್ತು ಇತರ ಸಂಸ್ಥೆಗಳೊಂದಿಗೆ ಪುಸ್ತಕಗಳ ಮತ್ತು ನಿಯತಕಾಲಿಕಗಳ ವಿನಿಮಯವನ್ನು ಕೈಕೊಳ್ಳುವುದು ಮತ್ತು ಅದಕ್ಕೆ ಪ್ರೋತ್ಸಾಹ ಕೊಡುವುದು ;

(ಜ) ಯಾವನೇ ವ್ಯಕ್ತಿಯ ಅಥವಾ ಸಂಸ್ಥೆಯ ಪರವಾಗಿ ಮಂಡಳಿಯ ಮತ್ತು ಅಂಥ ವ್ಯಕ್ತಿಯ ಅಥವಾ ಸಂಸ್ಥೆಯ ನಡುವೆ ಒಪ್ಪಿಗೆಯಾಗಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ (ಛಾಯಾಚಿತ್ರ ದ್ವಿಪ್ರತಿ ತಯಾರಿಕೆಯೂ ಒಳಗೊಂಡಂತೆ) ಹಸ್ತ ಪ್ರತಿಗಳ, ಪುಸ್ತಕಗಳ, ಸಾಮಗ್ರಿಗಳ ಅಥವಾ ವಸ್ತುಗಳ ದ್ವಿಪ್ರತಿಗಳ ತಯಾರಿಕೆಯನ್ನು, ಪರಿರಕ್ಷಣೆಯನ್ನು ಕೈಗೊಳ್ಳುವುದು ; ಮತ್ತು

(ಝ) ರಾಷ್ಟ್ರೀಯ ಗ್ರಂಥಾಲಯದ ಪಾತ್ರಕ್ಕೆ ತಕ್ಕುದಾಗಬಹುದಾದಂಥ ಇತರ ಎಲ್ಲ ಕಾರ್ಯಗಳನ್ನು ಮಾಡುವುದು.

21. ಮಂಡಳಿಯ ಅಧಿಕಾರಗಳು.—(1) ವಿಧಿಸುವುದು ಸೂಕ್ತವೆಂದು ಕೇಂದ್ರ ಸರ್ಕಾರವು ಆಲೋಚಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಎಲ್ಲ ಅಧಿಕಾರಗಳನ್ನು ಮಂಡಳಿಯು ಚಲಾಯಿಸಬಹುದು.

(2) ಮಂಡಳಿಯು ಈ ಬಗ್ಗೆ ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟು, ಗ್ರಂಥಾಲಯದಲ್ಲಿ ಪರಿರಕ್ಷಿಸಿಡಲು ಯೋಗ್ಯವಾದವುಗಳೆಂದು ತಾನು ಅಭಿಪ್ರಾಯ ಪಡಬಹುದಾದ ಹಸ್ತಪ್ರತಿಗಳನ್ನು, ಪುಸ್ತಕಗಳನ್ನು ಸಾಮಗ್ರಿಗಳನ್ನು ಅಥವಾ ವಸ್ತುಗಳನ್ನು ಮಂಡಳಿಯು ಕಾಲಕಾಲಕ್ಕೆ ಖರೀದಿ ಮಾಡಬಹುದು ಅಥವಾ ಅನ್ಯಥಾ ಅರ್ಜಿಸಬಹುದು.

## ಅಧ್ಯಾಯ—IV

### ಹಣಕಾಸು, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ವರದಿ

22. ಮಂಡಳಿಗೆ ಕೇಂದ್ರ ಸರ್ಕಾರದ ಅನುದಾನಗಳು.—ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸಲು ಮಂಡಳಿಗೆ ಸಾಧ್ಯವಾಗುವಂತೆ ಮಾಡುವ ಉದ್ದೇಶಕ್ಕಾಗಿ, ಈ ಬಗ್ಗೆ ಸಂಸತ್ತು ಕಾನೂನಿನಮೂಲಕ ಕ್ರಮಬದ್ಧವಾಗಿ ಹಣ ವಿನಿಯೋಗಕ್ಕೆ ಏರ್ಪಾಟು ಮಾಡಿದ ಅನಂತರ, ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ಹಣವನ್ನು ಅನುದಾನದ, ಸಾಲದ ರೂಪದಲ್ಲಿ ಅಥವಾ ಅನ್ಯಥಾ ಕೇಂದ್ರ ಸರ್ಕಾರವು ಪ್ರತಿ ಹಣಕಾಸು ವರ್ಷದಲ್ಲೂ ಮಂಡಳಿಗೆ ಸಂದಾಯ ಮಾಡಬಹುದು.

23. ಮಂಡಳಿಯ ನಿಧಿ.—(1) ಮಂಡಳಿಯು ಒಂದು ನಿಧಿಯನ್ನು ಇಟ್ಟುಕೊಂಡು ಬರತಕ್ಕದು ಮತ್ತು ಅದಕ್ಕೆ

(ಕ) ಕೇಂದ್ರ ಸರ್ಕಾರವು ಸಂದಾಯ ಮಾಡಿದ ಎಲ್ಲ ಹಣವನ್ನು ;

(ಖ) ಈ ಅಧಿನಿಯಮದ ಮೇರೆಗೆ ವಿಧಿಸಲಾದ ಎಲ್ಲ ಫೀಜುಗಳನ್ನು ಮತ್ತು ಇತರ ಚಾರ್ಜುಗಳನ್ನು ;

(ಗ) ಅನುದಾನದ, ದಾನದ, ದೇಣಿಗೆಯ, ಉಪಕಾರ ಧನದ, ಮರಣ ಶಾಸನದಾನದ, ಚಂದಾದ, ವಂತಿಗೆಯ, ಅಥವಾ ವರ್ಗಾವಣೆಯ ರೂಪದಲ್ಲಿ ಮಂಡಳಿಯು ಸ್ವೀಕರಿಸಿದ ಎಲ್ಲ ಹಣವನ್ನು ;

(ಘ) ಇತರ ಯಾವುದೇ ರೀತಿಯಲ್ಲಿ ಅಥವಾ ಇತರ ಯಾವುದೇ ಮೂಲದಿಂದ ಮಂಡಳಿಯು ಸ್ವೀಕರಿಸಿದ ಎಲ್ಲ ಹಣವನ್ನು ;

—ಜಮೆ ಮಾಡತಕ್ಕದು.

(2) ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ಮೊತ್ತಗಳನ್ನು ಮಂಡಳಿಯು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು ನಿಧಿಯಿಂದ ಸಂದಾಯ ಮಾಡಬೇಕಾದ ಮೊತ್ತಗಳೆಂದು ಪರಿಗಣಿಸತಕ್ಕದು.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಮೊಬಲಗನ್ನು ಮೀರದ ಹಣದ ಮೊತ್ತವನ್ನು ಭಾರತ ರಿಸರ್ವ್ ಬ್ಯಾಂಕಿನ ಅಧಿನಿಯಮ, 1934ರ (1934ರ 2) 2ನೇ ಪ್ರಕರಣದಲ್ಲಿ ಪರಿಭಾಷಿಸಲಾದಂಥ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಅನುಮೋದಿತವಾದ ಇತರ ಯಾವುದೇ ಬ್ಯಾಂಕಿನಲ್ಲಿ ಚಾಲ್ತಿ ಲೆಕ್ಕದಲ್ಲಿಡಬಹುದು, ಆದರೆ, ಆ ಮೊತ್ತಕ್ಕೆ ಮೀರಿದ ಯಾವುದೇ ಹಣವನ್ನು ಭಾರತದ ರಿಸರ್ವ್ ಬ್ಯಾಂಕಿನಲ್ಲಿ ಅಥವಾ ಭಾರತ ರಿಸರ್ವ್ ಬ್ಯಾಂಕಿನ ಏಜಂಟರಲ್ಲಿ ಇಡತಕ್ಕದು ಅಥವಾ ಕೇಂದ್ರ ಸರ್ಕಾರವು ಅನುಮೋದಿಸಬಹುದಾದಂಥ ರೀತಿಯಲ್ಲಿ ತೊಡಗಿಸತಕ್ಕದು.

24. ಆಯುವ್ಯಯ ಪತ್ರ.—(1) ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದೊಳಗಾಗಿ, ಮುಂದಿನ ಹಣಕಾಸು ವರ್ಷದ ಅಂದಾಜು ಆದಾಯವನ್ನು ಮತ್ತು ವೆಚ್ಚವನ್ನು, ಮತ್ತು ಆ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರದಿಂದ ಆಗತ್ಯವಾಗಿರುವ ಮೊತ್ತಗಳನ್ನು ತೋರಿಸುವ ಆಯುವ್ಯಯ ಪತ್ರವನ್ನು, ಅದು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಮಂಡಳಿಯು ಪ್ರತಿವರ್ಷದಲ್ಲಿ ಒಪ್ಪಿಸತಕ್ಕದು.

(2) ಕೇಂದ್ರ ಸರ್ಕಾರವು ಕೊಟ್ಟ ಯಾವುದೇ ಮೊತ್ತವು ಯಾವುದೇ ಹಣಕಾಸು ವರ್ಷದಲ್ಲಿ ಪೂರ್ಣವಾಗಿ ಅಥವಾ ಭಾಗಶಃ ಖರ್ಚಾಗದೆ ಉಳಿದರೆ, ಹಾಗೆ ಖರ್ಚಾಗದೆ ಉಳಿದಿರುವ ಹಣವನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದುವರಿಸತಕ್ಕದು ಮತ್ತು ಆ ವರ್ಷಕ್ಕೆ ಕೇಂದ್ರ ಸರ್ಕಾರವು ಒದಗಿಸಬೇಕಾಗುವ ಮೊತ್ತವನ್ನು ನಿರ್ಧರಿಸುವಲ್ಲಿ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದು.

(3) (4)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಅನುಮೋದಿಸಿದ ಆಯುವ್ಯಯ ಪತ್ರದಲ್ಲಿ ಖರ್ಚು ಮಾಡಲು ಉಪಬಂಧವನ್ನು ಕಲ್ಪಿಸಿಕೊಟ್ಟಿದ್ದ ಹೊರತು, ಮಂಡಳಿಯು ಅಥವಾ ಅದರ ಪರವಾಗಿ ಯಾವ ಮೊತ್ತವನ್ನೂ ವೆಚ್ಚ ಮಾಡತಕ್ಕದಲ್ಲ.

(4) ವಿಧಿಸುವುದು ಸೂಕ್ತವೆಂದು ಕೇಂದ್ರ ಸರ್ಕಾರವು ಆಲೋಚಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಒಂದು ವೆಚ್ಚದ ಶೀರ್ಷಿಕೆಯಲ್ಲಿನ ಹಣವನ್ನು ಇನ್ನೊಂದಕ್ಕೆ ಅಥವಾ ಒಂದು ಉದ್ದೇಶಕ್ಕೆ ಒದಗಿಸಲಾದ ಹಣವನ್ನು ಇನ್ನೊಂದು ಉದ್ದೇಶಕ್ಕೆ ಪುನರ್‌ವಿನಿಯೋಗಿಸಲು ಮಂಡಳಿಯು ಮಂಜೂರಾತಿಯನ್ನು ಕೊಡಬಹುದು.

25. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.—(1) ಮಂಡಳಿಯು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದು ಮತ್ತು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಹೊರಡಿಸಬಹುದಾದಂಥ ಸಾಮಾನ್ಯ ನಿರ್ದೇಶಗಳಿಗೆ ಅನುಸಾರವಾಗಿ, ಜಮಾ ಖರ್ಚು ಪಟ್ಟಿಯನ್ನು ಒಳಗೊಂಡಂತೆ, ವಾರ್ಷಿಕ ಲೆಕ್ಕದ ವರದಿಯನ್ನು ಸಿದ್ಧಪಡಿಸತಕ್ಕದು.

(2) ಮಂಡಳಿಯ ಲೆಕ್ಕಪತ್ರಗಳನ್ನು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಪ್ರತಿ ವರ್ಷವೂ ಪರಿಶೋಧನೆ ಮಾಡತಕ್ಕದು ಮತ್ತು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ ಅವನಿಗೆ ತಗಲಿದ ಯಾವುದೇ ವೆಚ್ಚವನ್ನು ಮಂಡಳಿಯು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ಲನಿಗೆ ಸಂದಾಯ ಮಾಡತಕ್ಕದು.

(3) ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಮತ್ತು ಮಂಡಳಿಯ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಅವನು ನೇಮಿಸಿದ ಯಾವನೇ ವ್ಯಕ್ತಿಯು, ಸರ್ಕಾರದ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ಲನಿಗೆ ಇರುವಂಥವೇ ಹಕ್ಕುಗಳು, ವಿಶೇಷ ಹಕ್ಕುಗಳು ಮತ್ತು ಅಧಿಕಾರವು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆಯೂ ಇರತಕ್ಕದು ಮತ್ತು ಅದರಲ್ಲಿಯೂ ವಿಶೇಷವಾಗಿ, ಪುಸ್ತಕಗಳನ್ನು ಲೆಕ್ಕಪತ್ರಗಳನ್ನು ಸಂಬಂಧಪಟ್ಟ ಓಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಹಾಗು ಕಾಗದ ಪತ್ರಗಳನ್ನು ಹಾಜರುಪಡಿಸಬೇಕೆಂದು ಕೇಳಲು ಮತ್ತು ಮಂಡಳಿಯ ಕಚೇರಿಯನ್ನು ಹಾಗು ಗ್ರಂಥಾಲಯವನ್ನು ಪರಿಶೀಲಿಸಲು ಹಕ್ಕುಳ್ಳವನಾಗಿರತಕ್ಕದು.

(4) ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ಲನು ಅಥವಾ ಈ ಬಗ್ಗೆ ಅವನು ನೇಮಿಸಿದ ಇತರ ಯಾವನೇ ವ್ಯಕ್ತಿಯು ಪ್ರಮಾಣೀಕರಿಸಿದ, ಮಂಡಳಿಯ ಲೆಕ್ಕಪತ್ರಗಳನ್ನು ಅವರ ಬಗೆಗಿನ ಲೆಕ್ಕಪರಿಶೋಧನೆಯ ವರದಿಯೊಡನೆ ಮಂಡಳಿಯು ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷ ಕಳುಹಿಸಿ ಕೊಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇರಿಸುವಂತೆ ಮಾಡತಕ್ಕದ್ದು.

26. ವಿವರಪಟ್ಟಿಕೆ ಮತ್ತು ವರದಿ.—(1) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರ ಪಟ್ಟಿಗಳನ್ನು, ವಿವರ ಪತ್ರಗಳನ್ನು ಮತ್ತು ವಿವರಗಳನ್ನು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ಕಾಲದಲ್ಲಿ ಮತ್ತು ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮಂಡಳಿಯು ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧೆಯುಂಟಾಗದಂತೆ ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ಮಂಡಳಿಯ ಕಾರ್ಯಚಟುವಟಿಕೆಗಳ ಬಗ್ಗೆ ನಿಜವಾದ ಮತ್ತು ಪೂರ್ಣವಾದ ವರದಿಯನ್ನು ಮತ್ತು ಚಾಲ್ತಿ ಹಣಕಾಸು ವರ್ಷದಲ್ಲಿ ಕೈಕೊಳ್ಳಬೇಕೆಂದು ಉದ್ದೇಶಿಸಲಾಗಿರುವ ಕಾರ್ಯಚಟುವಟಿಕೆಗಳ ವಿವರಗಳನ್ನು ಪ್ರತಿ ಹಣಕಾಸು ವರ್ಷವು ಪ್ರಾರಂಭವಾದ ಅನಂತರ ಸಾಧ್ಯವಾದಷ್ಟು ಬೇಗನೆ, ಕೇಂದ್ರ ಸರ್ಕಾರವು ನಿರ್ದಿಷ್ಟ ಪಡಿಸಬಹುದಾದಂಥ ಕಾಲದೊಳಗೆ ಮಂಡಳಿಯು ಕೇಂದ್ರ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆಯೂ ಇರಿಸುವಂತೆ ಮಾಡತಕ್ಕದ್ದು.

## ಅಧ್ಯಾಯ—V

## ಸಂಕೀರ್ಣ

27. ಅಧಿಕಾರಗಳ ಮತ್ತು ಕರ್ತವ್ಯಗಳ ಪ್ರತ್ಯಾಯೋಜನೆ.—ತಾನು ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲ ಅಥವಾ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸನ್ನಿವೇಶಗಳು ಮತ್ತು ಷರತ್ತುಗಳು ಏನಾದರೂ ಇದ್ದರೆ, ಅಂಥ ಸನ್ನಿವೇಶಗಳಲ್ಲಿ ಮತ್ತು ಷರತ್ತುಗಳ ಮೇರೆಗೆ ಈ ಬಗ್ಗೆ ಆದೇಶದಲ್ಲಿ ನಿರ್ದಿಷ್ಟಪಡಿಸಿದಂಥ ಮಂಡಳಿಯ ಯಾವನೇ ಸದಸ್ಯನು, ಅಥವಾ ಅಧಿಕಾರಿಯು ಅಥವಾ ಇತರ ನಿಯೋಜಿತನು ಸಹ ಚಲಾಯಿಸತಕ್ಕದೆಂದು ಅಥವಾ ನಿರ್ವಹಿಸತಕ್ಕದೆಂದು ಸಾಮಾನ್ಯವಾದ ಅಥವಾ ವಿಶೇಷವಾದ ಲಿಖಿತ ಆದೇಶದ ಮೂಲಕ ಮಂಡಳಿಯು ನಿರ್ದೇಶಿಸಬಹುದು.

28. ಮಂಡಳಿಯ ಅಧಿಕಾರಿಗಳು ಮತ್ತು ನಿಯೋಜಿತರು ಲೋಕ ನೌಕರರಾಗಿರತಕ್ಕದ್ದು.—ಮಂಡಳಿಯ ಎಲ್ಲ ಅಧಿಕಾರಿಗಳನ್ನು ಮತ್ತು ಇತರ ನಿಯೋಜಿತರನ್ನು (ಗ್ರಂಥಾಲಯದ ನಿರ್ದೇಶಕನನ್ನೂ ಒಳಗೊಂಡಂತೆ), ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ವಿನಿಯಮದ ಉಪಬಂಧಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ಕಾರ್ಯ ನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

29. ಈ ಅಧಿನಿಯಮದ ಮೇರೆಗೆ ಕೈಕೊಂಡ ಕ್ರಮಕ್ಕೆ ಸಂರಕ್ಷಣೆ.—ಈ ಅಧಿನಿಯಮದ ಅಥವಾ ಇದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಅಥವಾ ವಿನಿಯಮದ ಉಪಬಂಧಗಳನ್ನು ಅನುಸರಿಸಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲುದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಮಂಡಳಿಯ ಅಥವಾ ಮಂಡಳಿಯ ಯಾವನೇ ಸದಸ್ಯನ ಅಥವಾ ಯಾವನೇ ಅಧಿಕಾರಿಯ ಅಥವಾ ಇತರ ನಿಯೋಜಿತನ (ಗ್ರಂಥಾಲಯದ ನಿರ್ದೇಶಕನನ್ನು ಒಳಗೊಂಡಂತೆ) ವಿರುದ್ಧವಾಗಿ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

30. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರವು ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ ನಿಯಮಗಳನ್ನು ರಚಿಸಬಹುದು :

ಪರಂತು, ಮಂಡಳಿಯು ಸ್ಥಾಪನೆಯಾದ ಅನಂತರ, ಮಂಡಳಿಯೊಂದಿಗೆ ಸಮಾಲೋಚಿಸದೆ ಅಂಥ ಯಾವುದೇ ನಿಯಮವನ್ನು ರಚಿಸತಕ್ಕದ್ದಲ್ಲ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಬಾಧೆಬಾರದಂತೆ, ಅಂಥ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳಬಗ್ಗೆ ಉಪಬಂಧಿಸಬಹುದು, ಎಂದರೆ.—

(ಕ) ಸದಸ್ಯನಿಗೆ (11ನೇ ಪ್ರಕರಣದ ಮೇರೆಗೆ ನೇಮಿತನಾದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯನನ್ನು ಒಳಗೊಂಡು) ಮತ್ತು 12ನೇ ಪ್ರಕರಣದ ಮೇರೆಗೆ ಮಂಡಳಿಯೊಂದಿಗೆ ಜೊತೆಗೂಡಿ ಕೆಲಸ ಮಾಡುವ ಯಾವನೇ ವ್ಯಕ್ತಿಗೆ ಸಂದಾಯ ಮಾಡಬೇಕಾದ ಪ್ರಯಾಣ ಭತ್ಯ ಮತ್ತು ಇತರ ಭತ್ಯಗಳು ;

(ಖ) 15ನೇ ಪ್ರಕರಣದ ಮೇರೆಗೆ ಗ್ರಂಥಾಲಯದ ನಿರ್ದೇಶಕನ ಹುದ್ದೆಗೆ ನೇಮಕ ಮಾಡಬೇಕಾದ ರೀತಿ, ಮತ್ತು ಅವನ ಸಂಬಳ ಮತ್ತು ಭತ್ಯೆಗಳು ಹಾಗು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಗ) ಮಂಡಳಿಯು ಅಥವಾ ಮಂಡಳಿಯ ಪರವಾಗಿ ಯಾವ ಷರತ್ತುಗಳಿಗೆ ಒಳಪಟ್ಟು ಕರಾರು ಮಾಡಿಕೊಳ್ಳಬೇಕೋ ಆ ಷರತ್ತುಗಳು ಮತ್ತು ಕರಾರು ಮಾಡಿಕೊಳ್ಳಬೇಕಾದ ವಿಧಾನ ;

(ಘ) ನಿಯಮಿಸಬೇಕಾಗಿರುವ, ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದ್ದು, ಮತ್ತು ಅಧಿವೇಶನದ ನಿಕಟೋತ್ತರದ ಅಧಿವೇಶನವು ಅಥವಾ ಒಂದಾದ ಮೇಲೊಂದು ಬರುವ ಅಧಿವೇಶನಗಳು ಮುಗಿಯುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ತದನಂತರ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

31. ಮಂಡಳಿಯ ವಿನಿಯಮ ರಚನಾಧಿಕಾರ.—(1) ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಂದ, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ಈ ಅಧಿನಿಯಮಕ್ಕೆ ಮತ್ತು ಇದರ ಮೇರೆಗೆ ರಚಿತವಾದ ನಿಯಮಗಳಿಗೆ ಅಸಂಗತವಾಗದಂತೆ ಮಂಡಳಿಯು ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತ್ವಕ್ಕೆ ಬಾಧೆ ಬಾರದಂತೆ ಅಂಥ ವಿನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ.—

(ಕ) ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳನ್ನು ಮತ್ತು ಪುಸ್ತಕಗಳನ್ನು ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಉಪಯೋಗಿಸಬಹುದೋ ಆ ಷರತ್ತುಗಳು ಮತ್ತು ನಿರ್ಬಂಧಗಳು;

(ಖ) ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ವ್ಯಕ್ತಿಗಳನ್ನು ಮಂಡಳಿಯೊಂದಿಗೆ ಜೊತೆಗೂಡಿಸಿಕೊಳ್ಳಬಹುದು ;

(ಗ) ಮಂಡಳಿಯ ಸಭೆಗಳ ಕಾಲ ಮತ್ತು ಸ್ಥಳ, ಅಂಥ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಸಭೆಯಲ್ಲಿ ಕಾರ್ಯಕಲಾಪಗಳನ್ನು ನಡೆಸಲು ಅವಶ್ಯಕವಾಗಿರುವ ಕೋರಂ ;

(ಘ) ಮಂಡಳಿಯ ಸಭೆಗಳ ನಡವಳಿಕೆಗಳ ಸಂಕ್ಷಿಪ್ತ ದಾಖಲೆಗಳನ್ನು ಇಟ್ಟುಕೊಂಡು ಬರುವುದು ಮತ್ತು ಅವುಗಳ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡುವುದು;

(ಙ) ಮಂಡಳಿಯ ಅಧಿಕಾರಗಳ ಮತ್ತು ಇತರ ನಿಯೋಜಿತರ ಸೇವಾ ಭರ್ತಿ ಮತ್ತು ಸೇವಾ ಷರತ್ತುಗಳು ;

(ಚ) ಮಂಡಳಿಯ ಪರವಾಗಿ ಸಂದಾಯಗಳನ್ನು, ಠೇವಣಿಗಳನ್ನು ಮತ್ತು ಹೂಡಿಕೆಗಳನ್ನು ಯಾವ ವ್ಯಕ್ತಿಯು ಮಾಡಬಹುದು ಮತ್ತು ಯಾವ ರೀತಿಯಲ್ಲಿ ಮಾಡಬಹುದು ;

(ಛ) ಚಾಲ್ತಿ ಲೆಕ್ಕದಲ್ಲಿ ಇಡಬಹುದಾದ ಗರಿಷ್ಠ ಮೊಬಲಗು ;

(ಜ) ರಿಜಿಸ್ಟರುಗಳನ್ನು ಮತ್ತು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ;

(ಝ) ಗ್ರಂಥ ಸೂಚಿಗಳನ್ನು ತಯಾರಿಸುವುದು ಮತ್ತು ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳ, ಪುಸ್ತಕಗಳ, ಸಾಮಗ್ರಿಗಳ ಮತ್ತು ವಸ್ತುಗಳ ವಿವರಣಾ ಪಟ್ಟಿಗಳನ್ನು ಸಿದ್ಧಪಡಿಸುವುದು ;

(ಞ) ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳನ್ನು, ಪುಸ್ತಕಗಳನ್ನು, ಸಾಮಗ್ರಿಗಳನ್ನು ಮತ್ತು ವಸ್ತುಗಳನ್ನು ಪರಿರಕ್ಷಿಸುವುದಕ್ಕಾಗಿ ಕೈಗೊಳ್ಳಬೇಕಾದ ಕ್ರಮಗಳು ;

(ಟ) ಗ್ರಂಥಾಲಯದ ಸಾಮಾನ್ಯ ವ್ಯವಸ್ಥಾಪನೆ ;

(ಠ) ಗ್ರಂಥಾಲಯದಲ್ಲಿರುವ ಹಸ್ತಪ್ರತಿಗಳ ಮತ್ತು ಪುಸ್ತಕಗಳ ಛಾಯಾಚಿತ್ರ ಪ್ರತಿಗಳನ್ನು ಮಾಡಿಕೊಳ್ಳಲು ಒದಗಿಸಬಹುದಾದ ಸೌಕರ್ಯಗಳಿಗಾಗಿ ವಿಧಿಸಬೇಕಾದ ಫೀಜುಗಳು ಮತ್ತು ಇತರ ಚಾರ್ಜುಗಳು ;

(ಡ) ಗ್ರಂಥಾಲಯದಲ್ಲಿರುವ ಓದುಗರ ಹಾಸ್ಟೆಲಿನ ಕೊಠಡಿಗಳನ್ನು ಉಪಯೋಗಿಸುವುದಕ್ಕಾಗಿ ಬಾಡಿಗೆಯ ರೂಪದಲ್ಲಿ ವಿಧಿಸಬಹುದಾದ ಚಾರ್ಜುಗಳು ;

(ಢ) ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಯಾವ ವಿಷಯದ ಬಗ್ಗೆ ಉಪಬಂಧವು ಅವಶ್ಯವೆಂದು ಮಂಡಳಿಯು ಅಭಿಪ್ರಾಯಪಡುವುದೋ ಆ ಇತರ ಯಾವುದೇ ವಿಷಯ.

(3) ಕೇಂದ್ರ ಸರ್ಕಾರವು ಮಂಡಳಿಯೊಂದಿಗೆ ಸಮಾಲೋಚಿಸಿದ ಅನಂತರ, ತಾನು ಅನುಮೋದಿಸಿದ ಯಾವುದೇ ವಿನಿಯಮವನ್ನು, ಸರ್ಕಾರೀ ರಾಜಪತ್ರದಲ್ಲಿ ಅಧಿಸೂಚಿಸುವ ಮೂಲಕ, ತಿದ್ದುಪಡಿ ಮಾಡಬಹುದು, ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದು ಮಾಡಬಹುದು ಮತ್ತು ತದನಂತರ ಆ ವಿನಿಯಮವು ತದನುಸಾರವಾಗಿ ಪರಿಣಾಮಕಾರಿಯಾಗತಕ್ಕದು. ಆದರೆ (1)ನೇ ಮತ್ತು (2)ನೇ ಉಪಪ್ರಕರಣಗಳ ಮೇರೆಗಿನ ಮಂಡಳಿಯ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಬಾಧೆಯುಂಟು ಮಾಡತಕ್ಕದಲ್ಲ.

The above translation in Kannada of the National Library of India Act, 1972 (76 of 1976) has been authorised by the President to be published in the Official Gazette under section 2 of Authorised Translations (Central Laws) Act, 1973.

S. RAMAIAH,
Secretary to Govt. of India.